ಪರಮಪೂಜ್ಯ ಜಗದ್ಗುರು ಕರ್ಮಯೋಗಿ

ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು

ಶ್ರೀ ಕ್ಷೇತ್ರಶ್ರವಣಬೆಳಗೊಳ ೫೭೩೧೩೫

೧೮-೫-೧೯೯೯

ಶುಭ ಹಾರೈಕೆ

ಜೈನಧರ್ಮದ ಮೂಲ ಸತ್ವ ಮತ್ತು ತತ್ವವನ್ನು ಮುಖ್ಯ ಪ್ರೇರಣೆಯಾಗಿ ಸ್ವೀಕರಿಸಿ ರಚಿಸಿರುವ ಸಾಹಿತ್ಯದ ಯೋಗದಾನ ಭಾರತೀಯ ವಾಙ್ಮಯಕ್ಕೆ ತುಂಭ ಮೌಲಿಕವಾದುದು.

ದಕ್ಷಿಣ ಭಾರತದ ಪ್ರಮುಖ ಭಾಷೆಯಾದ ಕನ್ನಡದಲ್ಲಿಯೂ ಎರಡು ಸಾವಿರ ವರ್ಷಗಳ ಅವಿಚ್ಛಿನ್ನ ಅಹಿಂಸೆಯ ಅಮೃತದಾರೆ ಕಂಡು ಬರುತ್ತದೆ. ಬದುಕಿನ ಎಲ್ಲ ವಲಯಗಳಲ್ಲಿ, ಜ್ಞಾನದ ಎಲ್ಲ ಶಾಖೆಗಳಲ್ಲಿ ಜಿನರಿಂದ ಪ್ರಣೀತವಾಗಿ, ಮಹಾನ್ ಆಚಾರ್ಯರಿಂದ ಉಪದೇಶಿಸಲ್ಪಟ್ಟ ದಯಾಧರ್ಮದ ಲಕ್ಷಣಗಳು ಪ್ರಕಟವಾಗಿವೆ. ಕನ್ನಡ ನಾಡಿಗೂ, ಭಾಷೆಗೂ, ಸಾಹಿತ್ಯಕ್ಕೂ ಜೈನ್ ಪ್ರತಿಭಾವಂತರು ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಇದುವರೆಗೆ ಮೇದಾವಿಗಳು ನಡೆಸುತ್ತಾ ಬಂದಿರುವ ಮೌಲಿಕವಾದ ಅದ್ಯಯನವನ್ನು ಅದೇ ಪ್ರಮಾಣದಲ್ಲಿ ಮುಂದುವರಿಸಬೇಕಾದ್ದಿದೆ.

ಈ ಉದ್ದೇಶದಿಂದ ಪ್ರಾರಂಭವಾಗಿರುವ ಜೈನ ಅದ್ಯಯನ ಸಂಸ್ಥೆಯ ವತಿಯಿಂದ ಅರವಂಟಿಗೆ ಎಂಬ ತ್ರೈಮಾಸಿಕ ವಿದ್ವತ್ ಪತ್ರಿಕೆಯು ಸಂಶೋಧನೆಗಳಿಗೆ ಮೀಸಲಾಗಿರುವುದು ಸೂಕ್ತವಾಗಿದೆ. ಈ ಪತ್ರಿಕೆ ಜಾತಿಮತಪಂತ ವ್ಯತ್ಯಾಸವಿರದೆ ಎಲ್ಲ ವಿದ್ವಾಂಸರ ಲೇಖನಗಳನ್ನು ಪ್ರಕಟಿಸುವ ಮುಕ್ತ ವೇದಿಕೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇವೆ. ಭದ್ರಂ ಭೂಯಾತ್, ವರ್ಧತಾಂ ಜಿನಶಾಸನಂ.

ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯರು

ಶ್ರೀ ಜೈನಮಠ, ಶ್ರವಣಬೆಳಗೊಳ.

ಸಂಪಾದಕೀಯ

ಕರ್ನಾಟಕದ ಸಂಧರ್ಭದಲ್ಲಿ, ವಿದ್ವತ್ ಪ್ರಯತ್ನಗಳಿಗೆ ಆಧ್ಯತೆಯಿತ್ತು ಪ್ರಕಟವಾಗುವ ಪತ್ರಿಕೆಗಳಿಗೆ ಕೊರತೆಯಿಲ್ಲ. ಪ್ರಭುದ್ಧ ಕರ್ನಾಟಕ, ಪರಿಷತ್ತ ಪತ್ರಿಕೆ, ಕರ್ನಾಟಕ ಭಾರತಿ, ಸಾಧನೆ– ಮೊದಲಾದ ಸಾಂಸ್ಥಿಕ ಪ್ರಯತ್ನದ ಪ್ರೌಢ ಪತ್ರಿಕೆಗಳನ್ನು ಹೆಸರಿಸಬಹುದು. ಇದೀಗ ಹೊಸದಾಗಿ ಕಾರ್ಯಪ್ರವೃತ್ತವಾಗಿರುವ ಜೈನ ಅಧ್ಯಯನ ಸಂಸ್ಥೆಯವತಿಯಿಂದ, ಅರವಂಟಿಗೆ, ಎಂಬ ತ್ರೈಮಾಸಿಕವನ್ನು ಪ್ರಾರಂಭಿಸಿದ್ದೇವೆ. ಭಾರತದ ಪ್ರಾಚೀನ ಮತ್ತು ಪ್ರಭಾವಿ ಧರ್ಮಗಳಲ್ಲಿ ಒಂದಾದ ಜೈನಧರ್ಮದ ವಿಪುಲವಾದ ಸಾಹಿತ್ಯದ ವಿವಿಧ ಪಾತಳಿಗಳನ್ನು, ನಾನಾ ಆಯಾಮಗಳನ್ನು ಕುರಿತು ಅಧ್ಯಯನವನ್ನು ಪ್ರೋತ್ಸಾಹಿಸುವುದು ಇದರ ಪ್ರಧಾನ ಆಶಯ. ಹಾಗೆಂದು ಸಾಹಿತ್ಯ ವಿಶ್ಲೇಷಣೆಗಷ್ಟೇ ಇದು ಸೀಮಿತವಲ್ಲ. ಇತಿಹಾಸ, ಶಾಸನ ಅಧ್ಯಯನ, ವಾಸ್ತು, ಶಿಲ್ಪ, ಸಂಗೀತ, ಚಿತ್ರಕಲೆ, ಸಂಸ್ಕೃತಿ ಅಧ್ಯಯನ, ಜಾನಪದ, ಮನಶ್ಶಾಸ್ತ್ರ –ಹೀಗೆ ಹಲವು ಪೂರಕ ಕ್ಷೇತ್ರಗಳಲ್ಲಿ ಕೈಗೊಂಡ ಮೌಲಿಕ ಸಂಶೋದನೆಯ ಫಲಿತಗಳ ಪ್ರಕಟಣೆಗಳಿಗೂ ಈ ಪತ್ರಿಕೆಯಲ್ಲಿ ಅವಕಾಶವಿದೆ.

ಶ್ರವಣಬೆಳಗೊಳದ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳವರು ಈ ಪತ್ರಿಕೆಯ ಅಗತ್ಯವನ್ನು ಮನಗಂಡು ಪೂರ್ಣ ಪ್ರೋತ್ಸಾಹವನ್ನು ಸ್ವಾತಂತ್ರ್ಯವನ್ನೂ ನೀಡಿ ಹುರುದುಂಬಿಸಿರುತ್ತಾರೆ. ಈ ಪತ್ರಿಕೆಯು ಸಂಶೋಧಕರ ಆಡುಂಬೊಲವಾಗಿ ಬೆಳೆಯಬೇಕೆಂದು ಹರಸಿದ್ದಾರೆ; ಅವರ ವಿದ್ವತ್ ಪ್ರೇಮ ಅನುಕರಣೀಯ. ಪೂಜ್ಯ ಭಟ್ಟಾರಕರಿಗೆ ಭಕ್ತಿಯ ನಮನಗಳನ್ನು ತಿಳಿಸಲು ಹರ್ಷವೆನಿಸುತ್ತದೆ.

ಇದು ಮೊದಲ ಸಂಚಿಕೆ. ತ್ರೈಮಾಸಿಕವಾಗಿ ಹೊರಬರುವ ಈ ಪತ್ರಿಕೆಯ ಗುಣಮಟ್ಟವನ್ನು ಉಳಿಸಿ ಬೆಳೆಸುವುದು ವಿದ್ವಾಂಸರಿಂದ ಆಗಬೇಕಾದ ಕೆಲಸ. ನಾಡಿನ ಸೂರಿಗಳು ತಮ್ಮ ಹೊಸ ಸಂಶೋಧನ ಮತ್ತು ಅಪ್ರಕಟಿತ ಅಮೂಲ್ಯ ಲೇಖನಗಳನ್ನು ಕಳಿಸಬೇಕಾಗಿ ಕೋರುತ್ತೇನೆ. ಸಂಶೋಧನ ಲೇಖನಗಳಿಗೆ ಸೂಕ್ತ ಸಂಭಾವನೆಯನ್ನು ಕೊಡಲಾಗುವುದು. ಈ ಪತ್ರಿಕೆಯ ವಿನ್ಯಾಸ ಮತ್ತು ಸ್ವರೂಪ ಕುರಿತು ಅಳವಡಿಸಿಕೊಳ್ಳಬೇಕಾದ ಸಲಹೆಗಳನ್ನು ಸ್ವಾಗತಿಸುತ್ತೇವೆ.

ಹಂಪ ನಾಗರಾಜಯ್ಯ

೨೦–೦೫–೯೯

## ಮಾನಸ್ಥಂಭ ಮತ್ತು ಇತರ ವಿಗ್ರಹಗಳು

ಪ್ರೊ॥ ಎಸ್.ಡಿಶೆಟ್ಟಿ

ಜೈನವಾಸ್ತು ಮತ್ತು ಮೂರ್ತಿಶಿಲ್ಪಗಳನ್ನು ಬಿಟ್ಟರೆ, ಮಾನಸ್ಥಂಭವು ಕರ್ನಾಟಕ ಶಿಲ್ಪಕಲೆಗೆ ಜೈನಮತೀಯರ ವಿಶಿಷ್ಟ ಕೊಡುಗೆ. ಈ ಕಲಾಪ್ರಕಾರವನ್ನು ಗುರುತಿಗೆ, ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಜೈನ ಶಿಲ್ಪಕಲೆಯ ದೃಷ್ಠಿಯಿಂದ ಉಪಯುಕ್ತವೂ, ಅನಿವಾರ್ಯವೂ ಆಗಿದೆ.

ಜೈನವಾಸ್ತು ಮತ್ತು ಮೂರ್ತಿ ಶಿಲ್ಪಕ್ಕೆ ಮುಖ್ಯಪ್ರೇರಣೆ ತೀರ್ಥಂಕರನ ಸಮವಸರಣದ ಪರಿಕಲ್ಪನೆಯೆನ್ನು ವುದು ಸ್ಪಷ್ಟ. ಸಮವಸರಣದ ಪ್ರತಿಕೃತಿಯ ರೂಪದಲ್ಲಿ ಬಸದಿಯ ನಿರ್ಮಾಣ ಕಲೆಯು ವೈವಿಧ್ಯಮಯವಾಗಿ ಬೆಳೆದು ಬಂತು. ಬಸದಿಯ ಒಟ್ಟು ರಚನೆಯು ಸಂಕೀರ್ಣವಾದುದು. ಮಾನಸ್ತಂಭವು ಪ್ರತ್ಯೇಕ ಘಟಕವಾಗಿ ಬಸದಿಯ ಎದುರುಗಡೆಯಲ್ಲಿರುತ್ತದೆ. ಶಿಲ್ಪಕಲೆಯ ದೃಷ್ಠಿಯಿಂದ, ಇದು ಬಸದಿಯ ಎದುರು ಇರಲೇಬೇಕೆಂಬ ನಿಯಮವನ್ನು ಪಾಲಿಸಿದಂತೆ ತೋರುವದಿಲ್ಲ. ಇದು ಐಚ್ಛಿಕ. ಉದಾಹರಣೆಗೆ ದಕ್ಷಿಣ ಕನ್ನ ಡ ಜಿಲ್ಲೆಯ ೧೮೦ ಬಸದಿಗಳಲ್ಲಿ ಸುಮಾರು ೨೦–೨೪ ಬಸದಿಗಳ ಎದುರು ಮಾನಸ್ತಂಭಗಳನ್ನು ನಿರ್ಮಿಸಿದ್ದಾರೆ. ಉಳಿದವುಗಳ ಎದುರು ಮಾನಸ್ತಂಭಗಳ ಶಿಲ್ಪವಿಲ್ಲ.

ಜೈನ ಪ್ರಾಚೀನ ಗ್ರಂಥಗಳಲ್ಲಿ ತೀರ್ಥಂಕರನ ಸಮವಸರಣ ಮಂಟಪದ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಮಾನಸ್ತಂಭಗಳಿರುವುದನ್ನು ಉಲ್ಲೇಖಿಸಲಾಗಿದೆ. ಇವುಗಳ ಎತ್ತರ, ರೂಪ, ಲಕ್ಷಣ ಅಲಂಕಾರಗಳ ಕುರಿತು ಸಾಕಷ್ಟು ವಿವರಗಳೂ ಕಂಡುಬರುತ್ತವೆ. ಉತ್ತರ ಭಾರತದಲ್ಲಿರುವ ಪ್ರಾಚೀನ ಜೈನ ಮಂದಿರಗಳಲ್ಲಿ ಇಂಥ ಮಾನಸ್ತಂಭಗಳ ಕೆತ್ತನೆಗಳು ಹೆಚ್ಚಾಗಿ ಕಂಡು ಬಂದಿಲ್ಲ. ಆದರೆ ದಕ್ಷಿಣ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಇದರ ರಚನೆಗಳು ಆಶ್ಚರ್ಯ ಹುಟ್ಟಿಸುವಷ್ಟರಮಟ್ಟಿಗೆ ಆಗಾಧವಾಗಿ ಬೆಳೆದು ಬಂದಿವೆ. ರಾಷ್ಟ್ರಕೂಟರ ಕಾಲದಲ್ಲಿ ಆರಂಭಗೊಂಡು, ಚಾಳುಕ್ಯ ಹೊಯ್ಸಳರ ಕಾಲದಲ್ಲಿ ಬೆಳೆದು, ವಿಜಯನಗರ ಅರಸರ ಕಾಲದಲ್ಲಿ ತನ್ನ ತುತ್ತತುದಿಯನ್ನು ತಲುಪಿತು.

ಸಾಮಾನ್ಯವಾಗಿ ಮಾನಸ್ತಂಭದ ಎತ್ತರವು ತೀರ್ಥಂಕರನ ಶರೀರಾಕೃತಿಯ ಹನ್ನೆರಡುಪಟ್ಟು ಎತ್ತರವಾಗಿ ಇರುತ್ತವೆಂದು ಹೇಳಲಾಗಿದೆ. ಇದರ ಆಧಾರದ ಮೇಲೆ, ವಾಸ್ತು ಶಿಲ್ಪ ರಚನೆಯಲ್ಲಿ ಆಯಾ ತೀರ್ಥಂಕರರ ವಿಗ್ರಹದ ಎತ್ತರಕ್ಕೆ ಹೊಂದಿಕೊಂಡು ಮಾನಸ್ತಂಭವು ರಚನೆಗೊಂಡಿದೆ. ಪಣ್ಣತ್ತಿ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ವಿವರಿಸಿರುವಂತೆ ಇದರ ಒಟ್ಟುಸ್ವರೂಪವನ್ನು ಹೀಗೆ ಸಂಗ್ರಹಿಸಿ ಹೇಳಬಹುದು:

. . . . . ತೀರ್ಥಂಕರರ ಸಮಸವಸರಣ ಮಂಟಪಕ್ಕೆ ಬರುವ ನಾಲ್ಕು ದಿಕ್ಕುಗಳ ನಾಲ್ಕು ಮಾರ್ಗಗಳ ಮಧ್ಯದಲ್ಲಿ ನಾಲ್ಕು ಮಾನಸ್ತಂಭಗಳು ಸ್ಥಾಪಿತವಾಗಿರುತ್ತದೆ. ಇವು ಆಕಾರದಲ್ಲಿ ಗೋಲ ಮತ್ತು ನಾಲ್ಕು ಗೋಪುರ ದ್ವಾರಗಳೂ ದ್ವಜ–ಪತಾಕೆಗಳೂ ಇರುವ ಒಂದೊಂದು ಕೋಟೆಯಿಂದ ಸುತ್ತುವರಿದಿರುತ್ತದೆ. ಇದರ ನಾಲ್ಕೂ ಕಡೆಗೆ ಕ್ರಮವಾಗಿ ಸೋಮ, ಯಮ, ವರುಣ, ಕುಬೇರ ಇವರ ಕ್ರೀಡಾನಗರಗಳೂ ಹಾಗೂ ಇನ್ನಿತರ ವನಖಂಡಗಳೂ ಇರುತ್ತದೆ ಮಾನಸ್ತಂಭವು ಕ್ರಮವಾಗಿ ಚಿಕ್ಕ–ಚಿಕ್ಕದಾಗುತ್ತ ಹೋಗುವಂಥ ಮೂರು ಗೋಲಾಕಾರದ ಪೀಠಗಳ ಮೇಲೆಯಿದ್ದು, ಮೂರು ಖಂಡಗಳಲ್ಲಿ ವಿಭಾಜಿತವಾಗಿರುತ್ತವೆ. ಇದರ ನಾಲ್ಕೂ ದಿಕ್ಕುಗಳಿಗೆ ಚವರಿ, ಘಂಟೆ, ಗೆಜ್ಜೆ, ರತ್ನ ಹಾರ ಮತ್ತು ಧ್ವಜಗಳು ಶೋಭಿಸುತ್ತವೆ. ಇದರ ಶಿಖರದ ನಾಲ್ಕೂದಿಕ್ಕುಗಳಲ್ಲಿ ಅಶೋಕವೃಕ್ಷ, ದಿವ್ಯಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಆಸನ, ಭಾಮಂಡಲ, ದುಂದುಭಿ, ಛತ್ರಿ ಹೀಗೆ ಎಂಟು ಪ್ರಾತಿಹಾರ್ಯಗಳಿಂದ ಕೂಡಿದ ನಾಲ್ಕು ಜಿನಪ್ರತಿಮೆಗಳಿರುತ್ತವೆ. ಪ್ರತಿಯೊಂದು ಮಾನಸ್ತಂಭದ ನಾಲ್ಕು ದಿಕ್ಕುಗಳಲ್ಲೂ ನಾಲ್ಕು–ನಾಲ್ಕರಂತೆ ಒಟ್ಟೂ ಹದಿನಾರು ವಾಪಿಕೆಗಳಿರುತ್ತವೆ. ಪೂರ್ವ ದಿಕ್ಕಿನ ಮಾನಸ್ತಂಭದ ವಾಪಿಕೆಗಳು ನಂದೋತ್ತರಾ, ನಂದಾ, ನಂದೀಮತಿ, ನಂದಿಘೋಷಾಯೆಂದು, ದಕ್ಷಿಣದಿಕ್ಕಿನಲ್ಲಿ ವಿಜಯಾ, ವೈಜಯಂತಾ, ಜಯಂತಾ, ಅಪರಾಜಿತಾಯೆಂದೂ, ಪಶ್ಚಿಮ ದಿಕ್ಕಿನಲ್ಲಿ ಹೃದಯಾನಂದಾ, ಮಹಾನಂದಾ, ಸುಪ್ರತಿಬುದ್ಧಾ, ಪ್ರಭಂಕರಾಯೆಂದೂ ಆ ವಾಪಿಕೆಗಳನ್ನು ಹೆಸರಿಸಲಾಗಿದೆ. ಇವು ಚೌರಸಾಕಾರದ ಕಟ್ಟೆಗಳಿಂದಲೂ, ತೋರಣಗಳಿಂದಲೂ ಕೂಡಿದ್ದು, ಜಲಕ್ರೀಡೆಗೆ ಯೋಗ್ಯವಾಗಿ ದಿವ್ಯದ್ರವ್ಯಗಳು ಮತ್ತು ಸೋಪಾನಗಳಿಂದ ವ್ಯವಸ್ಥಿತವಾಗಿರುತ್ತವೆ.

ಇಂಥ ಮಾನಸ್ತಂಭದ ದರ್ಶನ ಮಾತ್ರದಿಂದ ಮದವು ದೂರವಾಗಿ ಧಾರ್ಮಿಕ ಶ್ರದ್ಧೆಯು ಉತ್ಪನ್ನ ವಾಗುತ್ತ"ವೆಂದು ವರ್ಣಿಸಲಾಗಿದೆ.

ಏಕಶಿಲಾ ಘಟಕದಿಂದ ಸುಂದರವಾಗಿ ಕೆತ್ತಲ್ಪಟ್ಟ ಮಾನಸ್ತಂಭಗಳ ರಚನೆಗಳನ್ನು ದೇಶ–ವಿದೇಶದ ಅನೇಕ ಶಿಲ್ಪಕಲಾ ತಜ್ಞರು ತಮ್ಮ ಆಶ್ಚರ್ಯವನ್ನೂ , ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ. ಇವುಗಳ ಪೀಠಭಾಗವು ಚತುರಸ್ರವಾಗಿದ್ದು, ಆಧಿಷ್ಠಾನದ ಕೆತ್ತನೆಯಲ್ಲೂ ಉತ್ತರ, ವಜನ, ಭೂತಾಳಿ, ಆಲಿಂಗನಪಟ್ಟಿ, ಕಪೋತ, ಅಂತರಿ, ಪದ್ಮಗಳ ಸೂಕ್ಷ್ಮ ಕೆತ್ತನೆಗಳಿರುತ್ತವೆ. ಉದಾಹರಣೆಗೆ – ಕಾರ್ಕಳದ ಹಿರಿಯಂಗಡಿ ನೇಮೀಶ್ವರ ಬಸದಿಯ ಎದುರಿನ ಮಾನಸ್ತಂಭದ ಆಧಿಷ್ಠಾನವನ್ನು ಗಮನಿಸಬಹುದು. ಸುಮಾರು ೫ ಅಡಿ ಎತ್ತರವುಳ್ಳ ಚತುರಸ್ರಪೀಠದ ಮಧ್ಯಭಾಗದಲ್ಲಿ ಲಂಬವಾಗಿ ಮಾನಸ್ತಂಭವನ್ನು ನಿಲ್ಲಿಸಲಾಗಿದೆ. ಸ್ತಂಭದ ಆರಂಭದ ಭಾಗವು ಚೌಕಾಕಾರದಲ್ಲಿದ್ದು ಮೇಲಕ್ಕೆ ಹೋದಂತೆ ಎಂಟು, ಹನ್ನೆರಡು, ಹದಿನಾರು ಕೋನಗಳನ್ನು ಪಡೆದುಕೊಳ್ಳುತ್ತ ನಾಲ್ಕು ಐದು ಅಂಕಣಗಳಲ್ಲಿ ಮೇಲಕ್ಕೆ ಏರುತ್ತದೆ. ಒಂದೊಂದು ಅಂಕಣ ಮುಗಿಯುವಲ್ಲೂ ವರ್ತುಲಗಳು ಹಾಗೂ ಭೇದ ಪಟ್ಟಿಕೆಗಳಿರುತ್ತವೆ (ಚಿತ್ರ) ಒಂದೊಂದು ಅಂತಸ್ತು ಮುಗಿಯುವಲ್ಲೂ ವಿವಿಧ ಅಲಂಕಾರದ ಪಟ್ಟಿಕೆಗಳು, ಮಣಿಸರಗಳು, ಬಳ್ಳಿಗಳು, ಸುತ್ತುವರಿದಿರುತ್ತವೆ. ಸ್ತಂಭದ ತುದಿಯಲ್ಲಿಗಳ, ಆಮಲಕ, ಪದ್ಮಪಟ್ಟಿಕೆಗಳಿದ್ದು ಅದರ ಮೇಲ್ಭಾಗದಲ್ಲಿ ಚಾಚುಪೀಠದ ಕೆತ್ತನೆಯಿರುತ್ತದೆ. ಅದರ ಮೇಲೆ ಇನ್ನೊಂದು ಚತುರಸ್ರ ಫಲಕವಿದ್ದು ಅದರ ಮೇಲೆ ನಾಲ್ಕೂದಿಕ್ಕಿಗೆ ತೆರೆದ ಮಂಟಪವಿದ್ದು ನಾಲ್ಕೂ ದಿಕ್ಕಿಗೆ ಮುಖಮಾಡಿ ಕಾಯೋತ್ಸರ್ಗಭಂಗಿಯಲ್ಲಿ ನಿಂತಿರುವ ನಾಲ್ಕು ಜಿನಬಿಂಬಗಳಿರುತ್ತವೆ. ಸಾಮಾನ್ಯವಾಗಿ ಈ ಮಂಟಪದ ತುದಿಯಲ್ಲಿ ದ್ರಾವಿಡ ಶೈಲಿಯ ಎರಡು – ಮೂರು ಅಂತಸ್ತುಳ್ಳ ಚಿಕ್ಕ ಶಿಖರವಿರುತ್ತದೆ. ಇವು ಮಾನಸ್ತಂಭಗಳ ಶಿಲ್ಪರಚನೆಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳಾಗಿವೆ.

ಮಾನಸ್ತಂಭಗಳ ಶಿಲ್ಪವು ಪ್ರಸಿದ್ಧ ಪ್ರಾಚೀನ ಜೈನ ಕೇಂದ್ರಗಳಾಗಿರುವ ಶ್ರವಣಬೆಳಗುಳ, ಹೊಂಬುಜ, ಕಾರ್ಕಳ, ಮೂಡಬಿದರೆ, ವರಾಂಗ, ಗೇರುಸೊಪ್ಪೆ, ಹಾಡುವಳ್ಳಿ, ಭಟ್ಕಳ ಮೊದಲಾದ ಕಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಕರ್ನಾಟಕದಲ್ಲಿರುವ ಮಾನಸ್ತಂಭಗಳಲ್ಲಿ ಅತ್ಯಂತ

ಎತ್ತರವಾದ ಹಾಗೂ ಕಲಾಪೂರ್ಣ ಮಾನಸ್ತಂಭವೆಂದರೆ ಕಾರ್ಕಳದ ಹಿರಿಯಂಗಡಿ ನೇಮಿಶ್ವರಸ್ವಾಮಿ ಬಸದಿಯ ಎದುರುಗಡೆಯಿರುವ ಮಾನಸ್ತಂಭ. ಕಾರ್ಕಳದ ಭೈರವ ವಂಶದ ಪಾಂಡ್ಯರಾಯನು ಕ್ರಿಶ. ೧೫೨೨ರಲ್ಲಿ ಇದನ್ನು ನಿರ್ಮಿಸಿದನು. ಇದರ ಎತ್ತರ ೫೨.೩ ಅಡಿಗಳು. ಶಿಲ್ಪಕಲೆಯ ದೃಷ್ಟಿಯಿಂದಲೂ, ಭವ್ಯಸೌಂದರ್ಯದ ದೃಷ್ಟಿಯಿಂದಲೂ ಇದನ್ನು ಮೀರಿಸಬಲ್ಲ ಸ್ತಂಭಗಳೇ ಇಲ್ಲವೆಂದು ಹೇಳಲಾಗುತ್ತಿದೆ. ಇಡೀ ಹಿಂದುಸ್ಥಾನದಲ್ಲಿ ಕನ್ನಡ ಜಿಲ್ಲೆಯ ಈ ಸ್ತಂಭದಂತೆ ಶ್ರೇಷ್ಠ ಅಭಿರುಚಿಯನ್ನು ತೋರಿಸುವುದು ಬೇರೆ ಯಾವುದೂ ಇಲ್ಲ ವೆಂದು – ವಿ. ಎ. ಸ್ಮಿತ್ ಹೇಳಿದರೆ, ಕಗ್ಗಲ್ಲಿನಲ್ಲಿ ಕೆತ್ತಲ್ಪಟ್ಟ ಈ ಮಾನಸ್ತಂಭವು ಕಲೆಯ ವಿಶೇಷ ಲಾವಣ್ಯದ ನಿದರ್ಶನವಾಗಿದೆ, ಈ ಸ್ತಂಭದ ಶಿರಸ್ಸಿನಲ್ಲಿ ಲಲಿತವೂ, ಮನೋಹರವೂ ಆದ ಕೆತ್ತನೆಯಿದ್ದು ಇದರ ರಾಜಠೀವಿಯನ್ನು ಮಿಗಿಸುವುದು ಅಸಾಧ್ಯ. ಸುತ್ತುಮುತ್ತಲಿನ ದೃಶ್ಯದೊಡನೆ ಇದು ಹೊಂದಿಕೊಳ್ಳುವದು ಆಕರ್ಷಕವಾಗಿದೆ. . . ಎಂದು ಡಾ ॥ ಎಸ್.ಆರ್. ಶರ್ಮ ಅವರು ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದಾರೆ. ಆಳದಂಗಡಿ ಪಾರ್ಶ್ವನಾಥ ಬಸದಿ, ಗುರುವಾಯನ ಕೆರೆಯ ಶಾಂತಿನಾಥ ಸ್ವಾಮಿ ಬಸದಿಯ ಎದುರುಗಡೆಯಲ್ಲಿರುವ ಮಾನಸ್ತಂಭಗಳು ಕ್ರಿ. ಶ ಸು ೧೫ನೇ ಶತಮಾನದ ರಚನೆಗಳಾಗಿದ್ದು ಸುಮಾರು ೪೦ ಅಡಿಗಳಷ್ಟು ಎತ್ತರವಾಗಿವೆ. ಇವುಗಳ ಮೇಲೆ ಜ್ಯಾಮಿತಿಯ ಅನೇಕ ರೀತಿಯ ಚಿತ್ರಗಳನ್ನು ಕೆತ್ತಿರುವುದು ಗಮನಾರ್ಹವಾಗಿದೆ. ಮುಲ್ಕಿಯ ಅನಂತನಾಥಸ್ವಾಮಿ ಬಸದಿಯ ಮಾನಸ್ತಂಭವು ಕ್ರಿ ಶ ೧೫೪೨ ರ ರಚನೆಯಾಗಿದ್ದು ಇದರ ಮೇಲೆ ನೀಲಾಂಜನೆಯ ನೃತ್ಯದ ಸನ್ನಿವೇಶವೊಂದನ್ನು ಸುಂದರವಾಗಿ ಸೆರೆಹಿಡಿಯಲಾಗಿದೆ. ಇದರ ಅಧಿಷ್ಠಾನದ ಮೇಲೆ ಉಬ್ಬು ಕೆತ್ತನೆಗಳಲ್ಲಿ ಜಿನಬಿಂಬಗಳು, ಪಕ್ಷಿ, ಬಳ್ಳಿ, ಪ್ರಾಣಿ ಮೊದಲಾದವುಗಳನ್ನು ಕಾಣಬಹುದು. ಜೊತೆಗೆ ಹಿಂದೂ ದೇವ–ದೇವತೆಯರ ಹಲವು ಚಿತ್ರಗಳನ್ನು ಬಿಡಿಸಿರುವುದು, ಜೈನ ಮತ್ತು ಹಿಂದೂ ಧರ್ಮಗಳ ಸಮನ್ವಯಕ್ಕೆ ಸಾಕ್ಷಿಯಾಗಿದೆ. ಬಾರಕೂರು ಮತ್ತು ವರಾಂಗಗಳಲ್ಲಿರುವ ಮಾನಸ್ತಂಭಗಳು ಈ ಭಾಗದ ಅತ್ಯಂತ ಪ್ರಾಚೀನ ಮಾನಸ್ತಂಭಗಳಾಗಿವೆ. ಅದರಲ್ಲೂ ಬಾರಕೂರಿನ ಮಾನಸ್ತಂಭದ ರಚನೆಯು ಸ್ವಲ್ಪಭಿನ್ನ ವಾಗಿದ್ದು, ಅದರ ಮೇಲೆ ಪ್ರಾಣಿದೇಹದ, ಮನುಷ್ಯನ ಮುಖವುಳ್ಳ ವಿಚಿತ್ರಾಕಾರದ ಶಿಲ್ಪದ ಕೆತ್ತನೆಯನ್ನು ನೋಡಬಹುದು. ದ್ಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಇನ್ನಿತರ

ಮಾನಸ್ತಂಭಗಳಲ್ಲಿ ಕ್ರಿಶ. ೧೫೩೭ರಲ್ಲಿ ನಿರ್ಮಾಣಗೊಂಡ ಶಾಂತಿಶ್ವರ ಬಸದಿಯ ಮಾನಸ್ತಂಭ, ಕ್ರಿಶ. ಸು. ೧೪ ನೇ ಶತಮಾನಕ್ಕೆ ಸೇರಿದ ಮೂಡಬಿದಿರೆಯ ಬಡಗು ಬಸದಿಯ ಮಾನಸ್ತಂಭ, ಕ್ರಿಶ. ಸು ೧೨ನೇ ಶತಮಾನಕ್ಕೆ ಸೇರಿದ ಲೆಪ್ಪದ ಬಸದಿಯ ಮಾನಸ್ತಂಭಗಳನ್ನು ವಿಶೇಷವಾಗಿ ಉಲ್ಲೇಖಿಸಬಹುದಾಗಿದೆ.

ಕ್ರಿ. ಶ. ೧೪೬೨ರಲ್ಲಿ ಗೇರುಸೊಪ್ಪೆಯ ಬೈರವನ ರಾಣಿಯಾದ ನಾಗಲದೇವಿಯು, ಮೂಡಬಿದಿರೆಯ ಹೊಸಬಸದಿಯ ಎದುರುಗಡೆಯಲ್ಲಿ ಸುಮಾರು ೫೦ ಅಡಿ ಎತ್ತರದ ಸುಂದರವಾದ ಮಾನಸ್ತಂಭವನ್ನು ನಿರ್ಮಿಸಿದ್ದಾರೆ. ತನ್ನ ವಿಶಿಷ್ಟವಾದ ಸೂಕ್ಷ್ಮ ಕೆತ್ತನೆಗಳಿಂದ ಭವ್ಯತೆಯಿಂದಲೂ ಇದು ಮನಸ್ಸನ್ನು ಸೂರೆಗೊಳ್ಳುತ್ತದೆ. ಇದರ ತುದಿಭಾಗದಲ್ಲಿ ನಾಲ್ಕು ದಿಕ್ಕಿಗೆ, ಚಾಚುಪೀಠಕ್ಕೆ ಹೊಂದಿಕೊಂಡಂತೆ, ಕಗ್ಗಲ್ಲಿನಲ್ಲಿಯೇ ನಿರ್ಮಿಸಿದ ಸರಪಳಿ ಘಂಟೆಗಳು ಆಶ್ಚರ್ಯವನ್ನು ಉಂಟು ಮಾಡುತ್ತವೆ.

ಮೊದಮೊದಲು ಬಸದಿಗಳ ಮುಂದೆ ಮಾನಸ್ತಂಭವನ್ನು ನಿಲ್ಲಿಸುವ ಪದ್ಧತಿಯು ಅಷ್ಟಾಗಿ ಕಂಡುಬರುವುದಿಲ್ಲ. ಎಲ್ಲೋರದ ಛೋಟಕೈಲಾಸವೆಂದು ಕರೆಯಲ್ಪಡುವ ಗುಹಾ ಬಸದಿಯಲ್ಲಿ ಪ್ರಥಮವಾಗಿ ಮಾನಸ್ತಂಭವು ಕಂಡುಬರುತ್ತದೆ. ರಾಷ್ಟ್ರಕೂಟ ಅಮೋಘವರ್ಷ ನೃಪತುಂಗ ಕಾಲದಿಂದ ಜೈನಧರ್ಮಕ್ಕೆ ದೊರೆತ ವಿಶೇಷ ಆಶ್ರಯ, ಪ್ರೋತ್ಸಾಹಗಳಿಂದಾಗಿ ಜೈನ ವಾಸ್ತು ವಿನ್ಯಾಸದಲ್ಲಿ ಸಾಕಷ್ಟು ಬದಲಾವಣೆಗಳು ನಡೆದವು. ಆ ಕಾಲದಿಂದ ಬಸದಿಯ ಮುಂದೆ ಮಾನಸ್ತಂಭವನ್ನು ನಿಲ್ಲಿಸುವ ಪದ್ಧತಿಯು ಆರಂಭಗೊಂಡು, ಮುಂದೆ ೧೩ನೇ ಶತಮಾನದಲ್ಲಿ ಸಂಪ್ರದಾಯವಾಗಿ ಬೆಳೆದು, ೧೭ನೇ ಶತಮಾನದವರೆಗೂ ಮುಂದುವರಿದುಬಂತು. ಶಾಂತರಕಾಲದಲ್ಲಿ ನಿರ್ಮಾಣಗೊಂಡ ಕ್ರಿಶ. ೯–೧೦ ನೇ ಶತಮಾನಕ್ಕೆ ಸೇರಿದ ಪಾರ್ಶ್ವನಾಥನ ಬಸದಿಯ ಎದುರು ಮಾನಸ್ತಂಭವಿದ್ದು, ಕಲೆಯ ದೃಷ್ಟಿಯಿಂದ ಇದನ್ನು ಗಮನಿಸಬಹುದಾಗಿದೆ. ಇದರ ಮೇಲೆ ನಾಲ್ಕೂ ಕಡೆಗಳಲ್ಲಿ ಖಡ್ಗಾಸನ ಭಂಗಿಯ ತೀರ್ಥಂಕರರ ಉಬ್ಬು ಶಿಲ್ಪವನ್ನು ಕೆತ್ತಿದ್ದಾರೆ. ಶ್ರವಣಬೆಳಗುಳದಲ್ಲಿ ಗಂಗ, ಹೊಯ್ಸಳರ ಕಾಲಕ್ಕೆ ಸೇರಿದ ಕೆಲವು ಮಾನಸ್ತಂಭಗಳಿವೆ. ಚಂದ್ರಗಿರಿಯಲ್ಲಿ ಗಂಗರ ಕಾಲಕ್ಕೆ ಸೇರಿದ ಕ್ರಿ. ಶ. ೯ನೇ ಶತಮಾನದ ಪಾರ್ಶ್ವನಾಥನ ಬಸದಿಯಿದ್ದು,

ಅದರ ಎದುರುಗಡೆಯಲ್ಲಿ ಮಾನಸ್ತಂಭವಿದೆ. ಇದರ ನಾಲ್ಕೂಕಡೆಯ ಚಾಚು ಹೊರಮೈಗಳ ಮೇಲೆ, ಪದ್ಮಾವತೀ, ಕೂಷ್ಮಾಂಡಿನೀ, ಬ್ರಹ್ಮನ ವಿಗ್ರಹಗಳನ್ನು ಕೆತ್ತಿದ್ದಾರೆ. ಇದನ್ನು ಮೈಸೂರು ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ಪುಳ್ಳಯ್ಯನೆಂಬ ವ್ಯಾಪಾರಿಯು ಮಾಡಿಸಿದನೆಂದು ತಿಳಿದುಬರುತ್ತದೆ. ಕ್ರಿ. ಶ. ೧೧೫೫ರಲ್ಲಿ ನಿರ್ಮಾಣಗೊಂಡ ಮಾನಸ್ತಂಭವೊಂದು ಇಲ್ಲಿಯ ಭಂಡಾರಿ ಬಸದಿಯ ಎದುರುಗಡೆಯಲ್ಲಿದ್ದು ಮನಸೆಳೆಯುವಂತಿದೆ. ನಾಗಮಂಗಲ ತಾಲೂಕಿನ ಪಂಚಕೂಟ ಬಸದಿಯ ಎದುರಿನಲ್ಲಿ ಮಾನಸ್ತಂಭವಿದ್ದು, ಇದನ್ನು ಬಳಪದಕಲ್ಲಿನಿಂದ ನಿರ್ಮಿಸಿರುವುದರ ವಿಶೇಷ. ಹಳೇಬೀಡಿನ ಬಸ್ತಿಹಳ್ಳಿಯ ಕ್ರಿ. ಶ. ೧೧೯೬ ಶಾಂತಿನಾಥ ಬಸದಿಯ ಎದುರು ಸಮಾರು ೨೦ ಅಡಿ ಎತ್ತರದ ಮಾನಸ್ತಂಭವಿದ್ದು ಇದನ್ನು ಕೂಡಬಳಪದಕಲ್ಲಿನಿಂದ ನಿರ್ಮಿಸಲಾಗಿದೆ. ಧಾರವಾಡ ಜಿಲ್ಲೆಯ ಪುಲಿಗೆರೆಯು (ಲಕ್ಷ್ಮೇಶ್ವರ) ಚಾಳುಕ್ಯ, ರಾಷ್ಟ್ರಕೂಟರ ಗಂಡು ಮೆಟ್ಟಿನ ನೆಲವಾಗಿದ್ದು, ಜೈನಧರ್ಮದ ಪ್ರಧಾನ ಕೇಂದ್ರ ಸ್ಥಾನವಾಗಿತ್ತು. ಇಲ್ಲಿ ೭೭೨ ಬಸದಿಗಳಿದ್ದವೆಂಬ ವರದಿಯು ನಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಇಲ್ಲಿಯ ಪ್ರಾಚೀನ ಶಂಖ ಬಸದಿಯ ಎಡುರುಗಡೆಯಲ್ಲಿ ಮಾನಸ್ತಂಭವಿದೆ. ಇದರ ಕೆತ್ತನೆಯ ಸರಳವಾಗಿದ್ದು, ವಿಶೇಷ ಅಲಂಕಾರಗಳು ಗೋಚರಿಸುವುದಿಲ್ಲ.

ಶಿಲೆಯ ಹೊರತಾಗಿ ಕಂಚಿನಿಂದ ಎರಕಹೊಯ್ದು ಮಾನಸ್ತಂಭವನ್ನು ತಯಾರಿಸುವ ಅಪೂರ್ವ ಪದ್ಧತಿಯೊಂದು ವಿಜಯನಗರ ಕಾಲದ ತುಳುನಾಡಿನಲ್ಲಿ ಬೆಳೆದು ಬಂದಿತ್ತು. ಇದ್ದಕ್ಕೆ ಸಂಬಂಧಿಸಿಡಂತೆ ಅಪರೂಪದ ಎರಡು ಉದಾಹರಣೆಗಳು ಇಲ್ಲಿಯ ಶಾಸನಗಳಲ್ಲಿ ಕಂಡು ಬರುತ್ತವೆ. ಕ್ರಿಶ. ೧೪೮೪ರಲ್ಲಿ ಹಾಡುವಳ್ಳೀಯ ಸಂಗಿರಾಯ ಒಡೆಯನು ತನ್ನ ರಾಜಧಾನಿಯಲ್ಲಿ ಚಂದ್ರನಾಥನ ಬಸದಿಯೊಂದನ್ನು ಮಾಡಿಸಿ, ಕರಚೆಲ್ವಾಗಿ ಕಂಚಿನ ಮಾನಸ್ತಂಭವೊಂದನ್ನು ನಿರ್ಮಿಸಿದಂತೆ ಅಲ್ಲಿಯ ಶಾಸನದಲ್ಲಿ ವರ್ಣಿಸಲಾಗಿದೆ. ಇನ್ನೊಂದು ಶಾಸನ ಗೇರುಸುಪ್ಪೆಗೆ ಸಂಬಂಧಿಸಿದ್ದು. ಕ್ರಿಶ. ೧೫೬೦ರಲ್ಲಿ ಅಲ್ಲಿಯ ರಾಜನಾದ ದೇವರಾಯನ ಆಳ್ವಿಕೆಯಲ್ಲಿ ಅಂಬಣ್ಣ ಸೆಟ್ಟಿಯೆನ್ನುವವನು ಅಲ್ಲಿಯ ನೇಮಿಜಿನಾಲಯದ ಮುಂದೆ ಸುಂದರವಾದ ಕಂಚಿನ ಮಾನಸ್ತಂಭವನ್ನು ಮಾಡಿಸಿದನಂತೆ ಹೇಳಲಾಗಿದೆ. ಈ ಎರಡು ಉದಾಹರಣೆಗಳನ್ನು ಬಿಟ್ಟರೆ, ಬೇರೆ ಎಲ್ಲಿಯೂ ಕಂಚಿನ ಮಾನಸ್ತಂಭವನ್ನು ಮಾಡಿಸಿದ ಉದಾಹರಣೆಗಳು ನಮಗೆ ಕಂಡು ಬರುವುದಿಲ್ಲ. ಗೇರುಸೊಪ್ಪೆಯಲ್ಲಿ

ನೇಮಿಜಿನಾಲಯವಿದ್ದರೂ, ಅಲ್ಲಿದ್ದ ಕಂಚಿನ ಮಾನಸ್ತಂಭವು ಈಗ ನಷ್ಟವಾಗಿದೆ. ಆದರೆ ಸುದೈವದಿಂದ ಹಾಡುವಳ್ಳಿಯಲ್ಲಿ ಸಂಗಿರಾಮ ಅರಸನು ಮಾಡೆಸಿದ್ದ ಮಾನಸ್ತಂಭದ ಮಧ್ಯಭಾಗವನ್ನು ಧಾರವಾಡ ವಿಶ್ವವಿದ್ಯಾಲಯದ ಕನ್ನ ಡ ಸಂಶೋಧನ ಕೇಂದ್ರದಲ್ಲಿ ಸಂರಕ್ಷಿಸಲಾಗಿದೆ. ಇದರ ಮೇಲೆ ಸಂಗಿರಾಯನು ಬರೆಸಿದ ಶಾಸನವೂ ಇದೆ. ಈ ಮಾನಸ್ತಂಭ ಪಿಠಭಾಗವು ಪತ್ತೆಯಾಗಿ, ಅದನ್ನು ಈಗ ಧರ್ಮಸ್ಥಳದ ಮಂಜೂಷಾ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ. ಚತುರಸ್ರವಾಗಿರುವ ಪೀಠವು ಸುಮಾರು ೭-೮ ಅಡಿಗಳಷ್ಟು ಎತ್ತರವಾಗಿದೆ. (ಚಿತ್ರ) ಈ ಮಾನಸ್ತಂಭದ ತುದಿಯ ಭಾಗವು ಎಲ್ಲಿದೆಯೆಂಬುದು ತಿಳಿದು ಬಂದಿಲ್ಲ.

ಬ್ರಹ್ಮಸ್ತಂಭಗಳು

ಮಾನಸ್ತಂಭದ ಶಿಲ್ಪವಿನ್ಯಾಸದಂತೆಯೇ, ಬ್ರಹ್ಮಸ್ತಂಭವು ಕೂಡ ಕರ್ನಾಟಕದಲ್ಲಿ ಕಂಡು ಬರುತ್ತದೆ. ಇದನ್ನು ಮಾನಸ್ತಂಭದ ಮತ್ತೊಂದು ಪ್ರಭೇಧವೆಂದು ಹೇಳಬಹುದು. ಈ ಸ್ತಂಭದ ತುದಿಯಲ್ಲಿ ತೆರೆದ ಮಂಟಪದಲ್ಲಿ ಜಿನಬಿಂಬಗಳಿಗೆ ಬದಲಾಗಿ, ಸುಖಾಸೀನ ಭಂಗಿಯ ಬ್ರಹ್ಮನ ವಿಗ್ರಹವಿರುತ್ತದೆ. ಇದನ್ನು ಬಾಹುಬಲಿಯ ಬೃಹದಾಕಾರದ ವಿಗ್ರಹದ ಎದುರುಗಡೆಯಲ್ಲಿ ನಿಲ್ಲಿಸುತ್ತಾರೆ. ತುಳುನಾಡಿನಲ್ಲಿ ಕಾರ್ಕಳ, ವೇಣೂರು, ಧರ್ಮಸ್ಥಳಗಳ ಗೊಮ್ಮಟೇಶ್ವರನ ವಿಗ್ರಹದ ಎದುರುಗಡೆಯಲ್ಲಿ ಬ್ರಹ್ಮಸ್ತಂಭಗಳಿವೆ. ಕಾರ್ಕಳದ ಬ್ರಹ್ಮಸ್ತಂಭವನ್ನು ಭೈರವವಂಶದ ಅರಸರು ಕ್ರಿಶ. ೧೪೩೬ರಲ್ಲಿ ಸ್ಥಾಪಿಸಿದರೆ, ವೇಣೂರಿನ ಬ್ರಹ್ಮಸ್ತಂಭವನ್ನು ಕ್ರಿಶ. ೧೬೦೪ರಲ್ಲಿ ತಿಮ್ಮಣ್ಣಾ ಜೀಲು ಸ್ಥಾಪಿಸಿದನು. ಧರ್ಮಸ್ಥಳದ ಬ್ರಹ್ಮಸ್ತಂಭವನ್ನು ಈಗಿನ ಧರ್ಮಾಧಿಕಾರಿಗಳಾಗಿರುವ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ೧೯೮೨ ರಲ್ಲಿ ಬಾಹುಬಲಿಯ ಎದುರುಗಡೆಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ಈ ಮೂರು ಬ್ರಹ್ಮಸ್ತಂಭಗಳ ತುತ್ತತುದಿಯಲ್ಲಿರುವ ಬ್ರಹ್ಮದೇವನ ಶಿಲ್ಪ ವಿನ್ಯಾಸಗಳು ಒಂದೇ ಬಗೆಯಾಗಿವೆ. ದ್ವಿಬಾಹು ಬ್ರಹ್ಮನು ಸುಖಾಸೀನ ಭಂಗಿಯಲ್ಲಿ ಕುಳಿತು ಒಂದು ಕೈಯಲ್ಲಿ ವಜ್ರಾಯುಧವನ್ನೂ ಮತ್ತೊಂದು ಕೈಯಲ್ಲಿ ಬಹುಬೀಜ ಫಲವನ್ನೂ ಹಿಡಿದಿದ್ದಾನೆ. ಈ ಸ್ತಂಭಗಳ ಮೇಲ್ಮೈ ಉಬ್ಬು ಕೆತ್ತನೆ, ಚಿತ್ರಪಟ್ಟಿಕೆ, ಮಣಿಸರಗಳ ಕೆತ್ತನೆಗಳೆಲ್ಲವೂ ಮಾನಸ್ತಂಭದ ಶೈಲಿಯನ್ನೇ ಹೋಲುತ್ತವೆ. ಧರ್ಮಸ್ಥಳದ ಬ್ರಹ್ಮಸ್ತಂಭದ ಚೌಕಮೇಲ್ಮೈಯಲ್ಲಿ ಒಟು ನಾಲ್ಕು

ಯಕ್ಷಿಯರ ಉಬ್ಬುಚಿತ್ರಗಳನ್ನು ಕೆತ್ತಿದ್ದಾರೆ. ವೃಷಭದೇವನ ಯಕ್ಷಿ ಚಕ್ರೇಶ್ವರಿ, ಚಂದ್ರನಾಥನ ಯಕ್ಷಿ ಜ್ವಾಲಾಮಾಲಿನಿ, ನೇಮಿನಾಥನ ಯಕ್ಷಿ ಕೂಷ್ಮಾಂಡಿನಿ, ಪಾರ್ಶ್ವನಾಥನ ಯಕ್ಷಿ ಪದ್ಮಾವತಿ. ಈ ನಾಲ್ವರು ಯಕ್ಷಿಯರು ಸುಖಾಸೀನ ಭಂಗಿಯಲ್ಲಿ ಕುಳಿತಿದ್ದು, ಸಾಂಪ್ರದಾಯಿಕ ವೇಷಬೂಷಣ, ಆಯುಧಗಳನ್ನು ಧರಿಸಿದ್ದಾರೆ. ಇದು ಈ ಸ್ತಂಬದ ವೈಶಿಷ್ಟ್ಯವಾಗಿದೆ. ವೇಣೂರಿನ ಬ್ರಹ್ಮಸ್ತಂಭದ ತುದಿಯಲ್ಲಿ ಸುಖಾಸೀನ ಭಂಗಿಯಲ್ಲಿ ಕುಳಿತ ಬ್ರಹ್ಮಯಕ್ಷನ ವಿಗ್ರಹದ ಜೊತೆಗೆ, ಉಬ್ಬು ಮೇಲ್ಮೈ ಮೇಲೆ ಕುದುರೆಯ ಮೇಲೆ ಕುಳಿತ ಬ್ರಹ್ಮನ ವಿಗ್ರಹವನ್ನು ಕೆತ್ತಲಾಗಿದೆ.

ಶ್ರವಣಬೆಳಗುಳದಲ್ಲಿ ತ್ಯಾಗದ ಬ್ರಹ್ಮದೇವರ ಸ್ತಂಭ ಮತ್ತು ಕೂಗೆ ಬ್ರಹ್ಮದೇವರ ಸ್ತಂಭ ಹೀಗೆ ಎರಡು ಸ್ತಂಭಗಳಿವೆ. ತ್ಯಾಗದ ಬ್ರಹ್ಮದೇವರ ಸ್ತಂಭವು ಶಿಲ್ಪಕಲೆಯ ದೃಷ್ಟಿಯಿಂದ ಗಮನಾರ್ಹವಾದುದು. ಈ ಸ್ತಂಭವು ಶಿಖರವುಳ್ಳ ಒಂದು ಅಂತಸ್ತಿನ ಚೌಕೋನ ಮಂಟಪದೊಳಗಿದೆ. ಅಂತಸ್ತಿನ ಕೆಳಭಾಗ ಸುತ್ತಲೂ ತೆರೆದಿದೆ. ಅಂತಸ್ತಿನ ಭಾಗಕ್ಕೆ ನಾಲ್ಕು ಬದಿಗಳಲ್ಲೂ ಗೋಡೆಗಳಿದ್ದು, ಒಂದು ಬದಿಯಲ್ಲಿ ಚಿತ್ರಿತ ಬಾಗಿಲು ಚೌಕಗಳುಳ್ಳ ಪ್ರವೇಶದ್ವಾರವಿದೆ. ಚೌಕೋನ ಸಿಂಹಪೀಠದ ಮೇಲೆ ಏರಿಸಿದ ಈ ಸ್ತಂಭವು ಬುಡದಲ್ಲಿ ಸುಮಾರು ಕಾಲುಭಾಗದಷ್ಟು ಚೌಕೋನವಾಗಿಯೂ ಉಳಿದ ಭಾಗವು ದುಂಡಾಗಿಯೂ ಇದೆ. ಚೌಕೋನ ಭಾಗದಲ್ಲಿ ರಾಜಸಭೆ ಮುಂತಾದ ಸುಂದರ ಚಿತ್ರ ಪಟ್ಟಿಕೆಗಳಿವೆ. ಮೇಲಿನ ಸ್ವಲ್ಪಭಾಗಬಿಟ್ಟು ದುಂಡು ಭಾಗದುದ್ದಕ್ಕೂ ಸುತ್ತಲೂ ಹೂ ಬಳ್ಳಿಯ ಚಿತ್ರವನ್ನು ಅಂದವಾಗಿ ಕೊರೆಯಲಾಗಿದ್ದು ವೈಶಿಷ್ಟ್ಯ ಪೂರ್ಣವಾಗಿದೆ. ಇದರ ಮೇಲಿನ ಶಾಸನವು ಚಾಮೂಂಡರಾಯನು ನೊಳಂಬರಾಜನ ಮೇಲೆ ಯುದ್ಧಮಾಡಿದ ವಿಷಯವನ್ನು ತಿಳಿಸುವುದರಿಂದ ಈ ಸ್ತಂಭವು ೧೦ ನೇ ಶತಮಾನದ್ದೆಂದು ನಿರ್ದರಿಸಲಾಗಿದೆ.

ಕೂಗೆ ಬ್ರಹ್ಮದೇವರ ಸ್ತಂಭವು ಇನ್ನೊಂದು ರೀತಿಯ ಶಿಲ್ಪ ವೈಶಿಷ್ಟ್ಯದಿಂದ ಕೂಡಿದೆ. ಇದು ಎರಡು ಚೌರಸ, ಒಂದು ವೃತ್ತಾಕಾರದ ಫಲಕಗಳಿಂದ ಕೂಡಿ ನಾಲ್ಕು ಅಂಕಣಗಳಲ್ಲಿ ನಿರ್ಮಾಣಗೊಂಡಿದೆ. ಇದರ ಪೀಠದ ಎಂಟೂ ದಿಕ್ಕುಗಳಲ್ಲಿ ಒಂದೊಂದು ಆನೆಯ ಚಿತ್ರವಿದ್ದು(ಅಷ್ಟದಿಗ್ಗಜಗಳು) ಅವು ಪೀಠ ಸಹಿತ ಸ್ತಂಭವನ್ನು ಹೊತ್ತುನಿಂತಂತೆ ಭಾಸವಾಗುತ್ತದೆ. ಇದರ ಮೇಲ್ಮೈಭಾಗವು ಚಿತ್ರಿತ ಅಷ್ಟಕೋನ ಪಟ್ಟಿಗಳಿಂದಾಗಿ ಸುಂದರವಾಗಿ ಕಾಣುತ್ತದೆ. ಕಾಂಡದ

ಮೇಲ್ಭಾಗವು ಕ್ರಮವಾಗಿ ಮೇಲಕ್ಕೆ ಪದ್ಮಭಂದ, ಕಲಶ, ತಾಡಿ, ಕುಂಭ, ಇಡಜೆ ಮತ್ತು ಚೌರಸ ಫಲಕಗಳಿಂದ ಕೂಡಿದ್ದು, ಇದರ ಮೇಲೆ ಸುಖಾಸೀನ ಭಂಗಿಯಲ್ಲಿ ಕುಳಿತ ಬ್ರಹ್ಮದೇವರ ಶಿಲ್ಪವಿದೆ. ಈ ಕಂಬದ ಮೇಲಿನ ಶಾಸನವು ಗಂಗಮಾರಸಿಂಹನು ಕ್ರಿ.ಶ.೯೭೪ರಲ್ಲಿ ಬಂಕಾಪುರದಲ್ಲಿ ಸಲ್ಲೇಖನ ವ್ರತದಿಂದ ಮರಣ ಹೊಂದಿರುವುದನ್ನು ತಿಳಿಸುತ್ತದೆ.

ಪಂಚ ಬ್ರಹ್ಮಸ್ತಂಭಗಳು

ಪಂಚಬ್ರಹ್ಮಸ್ತಂಭಗಳು ತುಳುನಾಡಿನಲ್ಲಿ ಎರಡಿವೆ. ಇವೆರಡೂ ವಿಜಯನಗರ ಕಾಲದ ಕೊಡುಗೆಗಳು. ನನಗೆ ತಿಳಿದಂತೆ ಈ ರೀತಿಯ ಶಿಲ್ಪವಿನ್ಯಾಸವುಳ್ಳ ಬ್ರಹ್ಮಸ್ತಂಭಗಳು ಕರ್ನಾಟಕದ ಬೇರೆ ಕಡೆಗಳಲ್ಲಿ ಕಂಡುಬಂದಿಲ್ಲ. ಮೊದಲನೆಯ ಸ್ತಂಭವು ಗುರುವಾಯನ ಕೆರೆಯ ಶಾಂತೀಶ್ವರ ಬಸದಿಯ ಎಡಭಾಗದಲ್ಲೂ, ಇನ್ನೊಂದು ಭಟ್ಕಳದ ಜಟ್ಟಪ್ಪನಾಯಕನ ಬಸದಿಯ ಎಡಭಾಗದಲ್ಲೂ ನಿರ್ಮಿಸಲಾಗಿದೆ. ಗುರುವಾಯನ ಕೆರೆಯ ಸ್ತಂಭವು ದ್ರಾವಿಡ ಶೈಲಿಯಲ್ಲಿದೆ. ಸ್ತಂಭದ ಮೇಲೆ ಶಿಖರದ ರೀತಿಯಲ್ಲಿ ಬ್ರಹ್ಮದೇವನ ಗುಡಿಯಿದ್ದು ಅದರಲ್ಲಿ ಬ್ರಹ್ಮನ ವಿಗ್ರಹವಿದೆ. ಸುಮಾರು ನಾಲ್ಕು ಅಡಿ ಎತ್ತರದ ಚತುರಸ್ರಾಕಾರದ ಅಧಿಷ್ಠಾನದ ಮೇಲೆ, ೨೦ ಅಡಿ ಎತ್ತರದ ಐದು ಸ್ತಂಬಗಳಿವೆ. ಈ ಸ್ತಂಬಗಳ ಮೇಲೆ ಬ್ರಹ್ಮನ ಗುಡಿಯನ್ನು ನಿರ್ಮಿಸಲಾಗಿದೆ. ಮದ್ಯದ ಸ್ತಂಭವು ಮಾನಸ್ತಂಭದಂತೆಯೇ ಕಲಾತ್ಮಕ ಕೆತ್ತನೆಯಿಂದ ಕೂಡಿದ್ದು, ಅದರ ಶಿಖರದ ಮೇಲೆ ಬ್ರಹ್ಮನ ವಿಗ್ರಹವು ಬರುವಂತೆ ಅಳವಡಿಸಿದ್ದಾರೆ . ಎದುರುಗಡೆ ಪ್ರವೇಶದ್ವಾರವಿದೆ. ಸುತ್ತಲಿನ ನಾಲ್ಕು ಚಾರುಸ್ತಂಭಗಳು, ಗುಡಿಯನ್ನು ಹೊತ್ತು ನಿಂತಿವೆ (ಚಿತ್ರ). ಸ್ತಂಭದ ಬೋದಿಗೆಯ ಮೇಲೆ ಚತುರಸ್ರ ಕುಡುವಿನಾಕಾರದ ,ಒಂದರ ಮೇಲೊಂದರರಂತೆ ಮೂರುಅಂತಸ್ತಿನ ಶಿಖರವಿದ್ದು, ಮೇಲಕ್ಕೆ ಹೋದಂತೆ, ಕಿರಿದಗುತ್ತವೆ. ತುದಿಯ ಭಾಗದ ಚಿಕ್ಕ ಮಂಟಪವನ್ನು ಹೊತ್ತುನಿಂತಂತೆ ತೋರುತ್ತದೆ. ಜೈನ ಬಸದಿಗಿರುವಂತೆ ಈ ಗುಡಿಗೆ ಮುಖಮಂಟಪದ ವಿನ್ಯಾಸವನ್ನು ರೂಪಿಸಿದ್ದಾರೆ. ಪ್ರವೇಶ ದ್ವಾರದ ಎರಡೂ ಪಾರ್ಶ್ವದಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ದ್ವಾರದ ಎರಡೂ ಪಾರ್ಶ್ವದ ಭಿತ್ತಿಯ ಮೇಲೆ, ಅರಳಿದ ಕಮಲದ ಚಿತ್ರವನ್ನು ಬಿಡಿಸಿದ್ದಾರೆ. ಶಿಖರದ ಮೂರೂ ಅಂತಸ್ತಿಗೂ ಪ್ರತ್ಯೇಕವಾದ ಮಾಡಿನ ರೀತಿಯ, ಬಾಗಿದ ಕಪೋತವಿದ್ದು (ಚಜ್ಜ) ಅದು ಮುಂಚಾಚಿಕೊಂಡು

ಗುಡಿಗೆ ರಕ್ಷಣೆಯನ್ನು ನೀಡುತ್ತದೆ. ಭಟ್ಕಳದ ಪಂಚಸ್ತೂಪ ಬ್ರಹ್ಮನ ಗುಡಿಯು, ತೀರ ಸರಳ ರಚನೆಯಾಗಿದ್ದು ಇದರಷ್ಟು ಕಲಾತ್ಮಕವಾಗಿಲ್ಲ.

ನಿಸಧಿ ಸ್ತಂಭ ಮತ್ತು ವೀರಗಂಬಗಳು

ಜೈನ ಮುನಿಗಳು ಸಲ್ಲೇಖನಪೂರ್ವಕವಾಗಿ ದೇಹತ್ಯಾಗ ಮಾಡಿದಾಗ ಅವರ ಸ್ಮಾರಕವಾಗಿ ನಿರ್ಮಿಸಿದ ಸ್ತಂಭಗಳಿಗೆ ನಿಸದಿ ಸ್ತಂಭಗಳೆಂದು ಹೆಸರು. ಕೆಲವೊಂದು ನಿಸಧಿ ಫಲಕನ್ನು ಹಾಕಿಸುವ ಪದ್ಧತಿಯೂ ಇದೆ. ಉತ್ತರ ಭಾರತದಲ್ಲಿ ತೀರ್ಥಂಕರರ ಮತ್ತು ಮುನಿಗಳ ಸ್ಮಾರಕವಾಗಿ ಸ್ತೂಪಗಳನ್ನು ನಿರ್ಮಿಸುವ ಪದ್ಧತಿಯೂ ಇದೆ. ಉತ್ತರ ಭಾರತದಲ್ಲಿ ತೀರ್ಥಂಕರರ ಮತ್ತು ಮುನಿಗಳ ಸ್ಮಾರಕವಾಗಿ ಸ್ತೂಪಗಳನ್ನು ನಿರ್ಮಿಸುವ ಪದ್ಧತಿಯೂ ಬೆಳೆದುಕೊಂಡು ಬಂದರೆ ದಕ್ಷಿಣ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಇಂಥ ಸ್ತೂಪ ರಚನೆಗಳು ಇದುವರೆಗೆ ಬೆಳಕಿಗೆ ಬಂದಿಲ್ಲ. ಮೊಗಲ್ ಸಾಮ್ರಾಟ ಅಕಬರನ ಕಾಲದಲ್ಲಿ ಮಧುರೆಯಲ್ಲಿ ೫೧೫ ಸ್ತೂಪಗಳು ಜೀರ್ಣಾವಸ್ಥೆಯಲ್ಲಿದ್ದವೆಂದು ಒಂದು ವರದಿಯು ತಿಳಿಸುತ್ತದೆ. ಅಲ್ಲಿ ದೊರೆತಿರುವ ಕ್ರಿಶ. ೨ನೇ ಶತಮಾನಕ್ಕೆ ಸೇರಿದ ಒಂದು ಸ್ತೂಪದ ಮೇಲೆ ಬ್ರಾಹ್ಮೀಲಿಪಿಯ ಶಾಸನವಿದೆ. ಶುಂಗರ ಕಾಲಕ್ಕೆ ಸೇರಿದ ಕ್ರಿ.ಪೂ. ೧೫೦ಕ್ಕೆ ಸೇರಿದ ಸ್ಥೂಪವೊಂದು ಭರಹೂತ್‌ನಲ್ಲಿ ದೊರೆತಿದೆ.

ಸಲ್ಲೇಖನವನ್ನು ವೀರಮರಣವೆಂದು ಪರಿಗಣಿಸಲ್ಪಟ್ಟಿರುವುದರಿಂದ ನಿಸಧಿಸ್ಮಾರಕಗಳನ್ನು ವೀರಸ್ಮಾರಕಗಳೆಂದು ಭಾವಿಸಲಾಗುತ್ತಿದೆ. ಮೂಡಭಟಕಳದ ಒಂದು ಶಾಸನದಲ್ಲಿ ವೀರಚನ್ನ ರಾಜುನು ಸಲ್ಲೇಖನವನ್ನು ಸ್ವೀಕರಿಸಿದಾಗ ವೀರಶಯ್ಯಾ ಸ್ಥಿತನಾದನೆಂದು ಆ ಶಾಸನವು ವರ್ಣಿಸುತ್ತದೆ. ಉತ್ತಮ ಸೆಟ್ಟಿಯ ವೀರಮರನವನ್ನು ವಿವರಿಸುವ ಕ್ರಿಶ.೧೨ನೇ ಶತಮಾನಕ್ಕೆ ಸೇರಿದ ನಿಸದಿಸ್ಮಾರಕವು ಮೂಡಬಿದಿರೆಯ ಅಮ್ಮನವರ ಬಸದಿಯ ಒಳಗಡೆಯಲ್ಲಿದೆ. ಅದರಲ್ಲಿ ಆತನು ಸಲ್ಲೆಖನಕ್ಕೆ ಕುಳಿತ ಭಂಗಿ, ಗುರುಗಳಿಂದ ಸಲ್ಲೇಖನವನ್ನು ಸ್ವೀಕರಿಸುತ್ತಿರುವ ವಿವರಗಳನ್ನು ಮೂರು ಅಂಕಣಗಳಲ್ಲಿ ಕೆತ್ತಿದ್ದಾರೆ. ಇಂಥ ಸ್ಮಾರಕಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಾವೆಯಾದರೂ ನಿಸಧಿ ಸ್ತಂಭಗಳು ಸಂಖ್ಯೆಯಲ್ಲಿ ಕಡಿಮೆಯೆಂದೇ ಹೇಳಬಹುದು. ಗೇರುಸೊಪ್ಪೆಯ ನಗರ ಬಸ್ತಿಕೇರಿಯ ಪಾರ್ಶ್ವನಾಥನ ಬಸದಿಯ ಎದುರು ಸುಮಾರು ೧೦-೧೨ ಅಡಿ ಎತ್ತರದ ಸುಂದರವಾದ ನಿಸದಿ

ಸ್ತಂಭವಿದೆ.  ಸ್ತಂಭವು ಚೌಕಾಕಾರವಾಗಿದ್ದು ಅದರ ಮೇಲ್ಮೆ ಮೇಲೆ ನಾಲ್ಕೂದಿಕ್ಕಿನಲ್ಲು  ನಾಲ್ವರು ಮುನಿಗಳು ಜಿನನ ಸನ್ನಿಧಿಯಲ್ಲಿ ಸಲ್ಲೆಖನ ವ್ರತವನ್ನು ಸ್ವೀಕರಿಸುತ್ತಿದ್ದುದನ್ನು , ಅವರು ದ್ಯಾನಸ್ಥಂಭಂಗಿಯಲ್ಲಿ ಕುಳಿತಿರುವುದನ್ನೂ  ತೋರಿಸಲಾಗಿದೆ.  ಅದರ ಕೆಳಗಡೆಯ ಕೋಷ್ಟದಲ್ಲಿ ಖಡ್ಗಾಗಸನ ಭಂಗಿಯ ಜಿನನ ಉಬ್ಬು ಚಿತ್ರವಿದೆ.  (ಚಿತ್ರ)ಚೌಕಮುಖದ ಒಂದೆಡೆ ಶಾಸನವಿದ್ದು ಆ ಮುನಿಗಳ ಹೆಸರನ್ನು  ವಿಮಲಕೀರ್ತಿ, ಶೃತಕೀರ್ತಿ, ಲಲಿತಕೀರ್ತಿಗಳೆಂದು ಸೂಚಿಸಲಾಗಿದೆ. ಇಂಥ ಕೆಲವು ಸ್ತಂಭಗಳು ಮಾವಳ್ಳಿ, ಕುಬಟೂರು, ಕುಪ್ಪಗದ್ದೆ, ಮುತ್ತಳ್ಳಿ, ಎಸಳೆಗಳಲ್ಲಿ ಕಂಡು ಬಂದಿದೆ.

ನಿಸಧಿ ಸ್ತಂಭಗಳಂತೆ, ವೀರಗಂಬಗಳೂ ಕೂಡ ಬಸದಿಯ ಪರಿಸರದಲ್ಲಿ ಕಂಡು ಬರುತ್ತವೆ. ಯುದ್ದದಲ್ಲಿ ಮಡಿದ ಯೋಧನ ಸ್ಮಾರಕವಾಗಿ ಇಂಥ ಸ್ತಂಭವನ್ನು ನಿಲ್ಲಿಸಲಾಗಿತ್ತಿತ್ತು. ಹುನ್ನಾವರ ತಾಲೂಕು ಮಂಕಿಯ ಶಾಂತೆಶ್ವರ ಬಸದಿಯ ಎದುರುಗಡೆ ಒಂದು, ಹಾಗೂ ಬಲಭಾಗದಲ್ಲಿ ಒಂದು, ಒಟ್ಟು ಎರಡು ವೀರಗಂಭಗಳಿವೆ. ಇದು ಸುಮಾರು ೧೨ ಅಡಿ ಎತ್ತರವಿದ್ದು ಉಪರ, ಪಟ್ಟಿ, ಚವುಲ, ಭಾಗಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಪಟ್ಟಿಯ ಭಾಗವು ಅಷ್ಟಕೋನದಲ್ಲಿರದೇ, ಚೌಕಾಕಾರದಲ್ಲಿದ್ದು, ಮೇಲಕ್ಕೆ ಹೋದಂತೆ ಚಿಕ್ಕದಾಗುತ್ತಾ ಮುಂದುವರಿದಿದೆ. ತುದಿಯಲ್ಲಿ ಶಿರೋವೇಷ್ಟನವನ್ನು ಶಿಖರದ ರೀತಿಯಲ್ಲಿ ಕೆತ್ತಿರುವುದು ಇದರ ವೈಶಿಷ್ಟ್ಯವಾಗಿದೆ. ಸ್ತಂಭಗಳ ನಾಲ್ಕು ದಿಕ್ಕುಗಳ ಮೇಲ್ಮೈಯಲ್ಲಿ ಯುದ್ಧದ ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಜೊತೆಗೆ ಮಹಾಭಾರತ, ರಾಮಾಯಣ, ಪುರಾಣ ಲೋಕಕ್ಕೆ ಸಂಬಂಧಿಸಿದ ಹಲವು ಪ್ರಸಂಗಗಳನ್ನು ಕೆತ್ತಿದ್ದಾರೆ. ಇದರ ಮೇಲಿರುವ ಶಾಸನದ ಲಿಪಿಯ ಆಧಾರದ ಮೇಲೆ ಇದರ ಕಾಲ ಕ್ರಿಶ. ೧೦–೧೧ನೇ ಶತಮಾನವೆನ್ನಬಹುದು. ಇದೇ ರೀತಿ ಸರಳವಾಗಿರುವ ಸ್ತಂಭವೊಂದು ಹಿರಿಯಡಕದ ಹಾಳುಬಿದ್ದ ಬಸದಿಯ ಬಲಭಾಗದಲ್ಲಿದೆ.  ಸುಮಾರು ೧೦ ಅಡಿ ಎತ್ತರವಿರುವ ಈ ಸ್ತಂಭವು ವೀರಗಂಬದ ಎಲ್ಲಾ ಅಂಶಗಳನ್ನೂ ಒಳಗೊಂಡಿದೆ. ಈ ದೃಷ್ಟಿಯಿಂದ ಶ್ರವಣಬೆಳಗುಳದಲ್ಲಿರುವ ತ್ಯಾಗದ ಬ್ರಹ್ಮದೇವರ ಸ್ತಂಭವನ್ನು ಕೂಡ ವೀರಗಂಬಗಳೆಂದೇ ಗುರುತಿಸ ಬೇಕಾಗುತ್ತದೆ.

ಇತರ ಬಿಂಬಗಳು

ಜೈನ ಮತೀಯರು ಆರಾಧಿಸುವ ಇತರ ಬಿಂಬಗಳಲ್ಲಿ ಈ ಕೆಳಗೆ ವಿವರಿಸಿರುವ ಕೆಲವು ಬಿಂಬಗಳು ಅಧ್ಯಯನ ಯೋಗ್ಯವಾಗಿವೆ.

ಪಂಚಪರಮೇಷ್ಠಿ ಮತ್ತು ನವದೇವತೆಗಳ ಶಿಲ್ಪ

ನಂದಿಶ್ವರ ಪ್ರತಿಮೆ, ಮೇರುಪರ್ವತ, ಸಹಸ್ರಕೂಟ

ಬ್ರಹ್ಮ, ಕ್ಷೇತ್ರಪಾಲ, ನಾಗ ಶಿಲ್ಪಗಳು

ವಿದ್ಯಾಧಿ ದೇವತೆಗಳು; ಶ್ರುತಸ್ಕಂದ, ಸರಸ್ವತಿ

ಸಂಕೀರ್ಣ ಪ್ರತಿಮೆಗಳು; ಗಣಧರಪಾದ, ಮುನಿಗಳಪಾದ

ಪಂಚಪರಮೇಷ್ಠಿ ಮತ್ತು ನವದೇವತೆಗಳ ಶಿಲ್ಪ

ಪ್ರತಿಯೊಂದು ಜೈನಬಸದಿಯ ನವರಂಗದಲ್ಲಿ ಅಥವಾ ತೀರ್ಥಕರ ಮಂಟಪದ ಗಂಧಕುಟೀಯಲ್ಲಿ ಅಸಂಖ್ಯಾತ ಜಿನಬಿಂಬಗಳಿರುತ್ತವೆ. ಅವುಗಳಲ್ಲಿ ಲೋಹದ ಫಲಕವೊಂದರಲ್ಲಿ ಪಂಚಪರಮೇಷ್ಠಿಗಳು ಅಥವಾ ನವದೇವತೆಗಳ ಚಿತ್ರವನ್ನು ಕೊರೆದಿರುವ ಪ್ರತಿಮೆಯ ಕಂಡುಬರುತ್ತದೆ. ಜೈನ ಸಂಪ್ರದಾಯದಲ್ಲಿ ಪೂಜ್ಯರಾದ ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧುಗಳನ್ನು ಪಂಚಪರಮೇಷ್ಠಿಗಳೆಂದು ಕರೆಯುತ್ತಾರೆ.ಇವುಗಳ ಜೊತೆಗೆ ಜಿನಧರ್ಮ, ಜಿನಾಗಮ, ಜಿನಚೈತ್ಯ, ಜಿನಚೈತ್ಯಾಲಯಗಲೂ ಪವಿತ್ರವಾದವುಗಳೆಂದು ಭಾವಿಸಿ, ಮೇಲೆ ಹೆಸರಿಸಿದ ಪಂಚಪರಮೇಷ್ಠಿಗಳ ಜೊತೆಗೆ ಸೇರಿಸಿ, ಇವುಗಳ ಒಟ್ಟು ನವದೇವತೆಗಳೆಂದು ಕರೆಯುತ್ತಾರೆ. ಜೈನರು ತಮ್ಮ ದಿನ ನಿತ್ಯದ ಜಪ, ಸ್ತೋತ್ರ,ದೇವ ಪೂಜಾ ,ಸಂಧ್ಯಾವಂದನಾದಿಗಳಲ್ಲಿ ನವದೇವತೆಗಳ ಹೆಸರನ್ನು ಉಚ್ಚರಿಸುತ್ತಾರೆ. ನವದೆವತೆಗಳ ಶಿಲ್ಪವು ಇಲ್ಲದಿರುವ ಸಂಧರ್ಬಗಳಲ್ಲಿ, ಅಕ್ಕಿಯ ಒಂಬತ್ತು ಪುಂಜಗಳನ್ನಿಟ್ಟು ನವದೇವತೆಗಳನ್ನು ದ್ಯಾನಿಸುತ್ತಾರೆ.

ನವದೇವತೆಗಳ ಶಿಲ್ಪ ವಿನ್ಯಾಸದಲ್ಲಿ(ಚಿತ್ರ) ಅರಹಂತರ (ತೀರ್ಥಂಕರ) ಪ್ರತಿಮೆಯು ಮಧ್ಯದಲ್ಲಿದ್ದು, ಉಳಿದವುಗಳು ಅದರ ಸುತ್ತ ಇರುತ್ತವೆ. ಈ ಅರಹಂತರ ಪ್ರತಿಮೆಗೂ ಉಳಿದ ಸಿದ್ದ,ಆಚಾರ್ಯ, ಉಪಾದ್ಯಾಯ, ಸರ್ವಸಾದುಗಳ ಪ್ರತಿಮೆಗಳಿಗೂ ಹೆಚ್ಚು ವ್ಯತ್ಯಾಸಗಳು ಗೋಚರಿಸುವದಿಲ್ಲ.ಅರಹಂತರ ಹಾಗೆ ಉಳಿದವರೂ ಪಲ್ಯಂಕಾಸನ ಅಥವಾ ಪದ್ಮಾಸನ ಭಂಗಿಯಲ್ಲಿ

ದ್ಯಾನಸ್ತರಾಗಿ ಕುಳಿತಿರುತ್ತಾರೆ. ಶಿಲಾಫಲಕ ಇಲ್ಲವೇ ಲೋಹದ ಫಲಕದ ಮದ್ಯ ಇರುವ ಅರಹಂತಾರ ಮೇಲ್ಭಾಗದಲ್ಲಿ ಸಿದ್ದಪರಮೇಷ್ಠಿಯ ಪ್ರತಿಮೆಯಿರುತ್ತದೆ. ಏಕೆಂದರೆ ಅರಹಂತರಿಗಿಂತ ಸಿದ್ದರ ಸ್ತಾನವು ಉನ್ನ ತವಾದುದು.ಇವರು ತೀರ್ಥಂಕರರಂತೆ ಸಕಲಕರ್ಮಗಳನ್ನು ನಾಶ್ ಮಾಡಿದವರು. ಶ್ ರೀರರಹಿತವಾಗಿ ಎಂಟುಗುಣಗಳಿಂದ ಭೂಷಿತರಾಗಿರುವುದರಿಂದ ಈ ಸ್ಥಿತಿಯು ಅರಹಂತರ ಸ್ಥಿತಿಗಿಂತ ಶ್ರೇಷ್ಠವೂ, ಪೂಜ್ಯವೂ ಆಗಿದೆಯೆಂದು ಭಾವಿಸುತ್ತಾರೆ. ಇಲ್ಲಿ ಆತ್ಮನು ಶ್ ರೀರ ರಹೀತನಾಗಿರುವುದರಿಂದ ಲೋಕಕ್ಕೆ ಧರ್ಮೋಪದೇಶ್ ಮಾಡುವ ಅವಕಾಶ್ ವಿಲ್ಲ. ಅರಹಂತನ ಅವಸ್ಥೆಯಲ್ಲಿ ಆತ್ಮನು ದಿವ್ಯಶ್ ರೀರೋಪೇತನಾಗಿರುವುದರಿಂದ ಲೋಕಕ್ಕೆ ಧರ್ಮೋಪದೇಶ್ ವನ್ನು ಮಾಡಬಲ್ಲ.

ಈ ದೃಷ್ಟಿಯಿಂದ ಅರಹಂತನಿಗೆ ವ್ಯಾವಹಾರಿಕವಾಗಿ ಉನ್ನ ತ ಸ್ಥಾನವನ್ನು ನೀಡಲಾಗಿದೆ. ಬಸದಿಗಳಲ್ಲಿ ಸಿದ್ದಪರಮೇಷ್ಠಿಯ ಬಿಂಬವು ಹೆಚ್ಚಾಗಿ ಸ್ಪಟಿಕದಿಂದಲೂ, ಅಮೃತಶಿಲೆಯಿಂದಲೂ ಮಾಡಿಸುತ್ತಾರೆ (ಚಿತ್ರ). ವಿಜಯನಗರ ಕಾಲಕ್ಕೆ ಸೇರಿದ ಮೂಡಬಿದಿರೆಯ ತ್ರಿಭುವನ ತಿಲಕ ಚುಡಾಮಣಿ ಬಸದಿಯ ಮೇಲಿನ ಅಂತಸ್ತಿನ ಶಿದ್ದರ ಕೂಟದಲ್ಲಿ ಅಸಂಖ್ಯಾತ ಸಿದ್ದರ ಬಿಂಬಗಳಿವೆ. ಇದೇ ರೀತಿ ರಾಷ್ಟ್ರಕೂಟ, ಹೊಯ್ಸಳರ ಕಾಲಕ್ಕೆ ಸೇರಿದ ಅಮೂಲ್ಯವಾದ ಹಾಗೂ ಬಿಂಬಗಳು ಗುರುಬಸದಿಯ (ದಣ್ಣಾಯಕರ ಬಸದಿ) ಸಿದ್ದಾಂತದಲ್ಲಿ ಇಟ್ಟದ್ದಾರೆ. ಜೈನ ದರ್ಮದಲ್ಲಿ ಉಕ್ತವಾಗಿರುವ ಪಂಚಮಹಾ ವ್ರತಗಳು, ಪಂಚಸಮಿತಿ, ತ್ರಿಗುಪ್ತಿ, ಹದಿಮೂರು ಚಾರಿತ್ರ್ಯಗಳನ್ನು ಪಾಲಿಸುವವರೂ, ತಮ್ಮ ಶಿಷ್ಯ ಮುನಿಸಂಘದ ಆಧಿಪತಿಯೂ ಆದ ಆಚಾರ್ಯರನ್ನು ಆಚಾರ್ಯ ಪರಮೇಷ್ಠಿ ಯೆಂದು ಕರೆಯುತ್ತಾರೆ. ಇದೇ ರೀತಿ ಚತುರ್ದಶ್ ಪೂರ್ವಗಳನ್ನು ಪಠನ–ಪಾಠ ಮಾಡುವ ಯೋಗಿಗೆ ಉಪಾಧ್ಯಾಯ ಪರಮೇಷ್ಠಿಯೆಂಡೂ, ಸಮಸ್ತ ಬಾಹ್ಯವ್ಯಾಪರವನ್ನು ತೊರೆದು ಆಧ್ಯಾತ್ಮನಿರತನಾಗಿರುವ ಮುನಿಶ್ರೇಷ್ಠನಿಗೆ ಸಾಧುಪರಮೇಷ್ಠಿಯೆಂದೂ ಕರೆಯುತ್ತಾರೆ. ನವದೇವತೆಗಳ ಫಲಕದಲ್ಲಿ ಇವರ ಸ್ಥಾನನಿರ್ದೇಶ್ ನದಂತೆ ಇವರ ಪ್ರತಿಕೃತಿಗಳಿರುತ್ತವೆ. ಮೇಲ್ನೋಟಕ್ಕೆ ಈ ಐದೂ ಜನ ಬಿಂಬಗಳಲ್ಲಿ ಹೆಚ್ಚಿನ ವ್ಯತ್ಯಾಸಗಳು ಗೋಚರಿಸುವುದಿಲ್ಲ ವಾದರೂ, ಕೊನೆಯ ಮೂವರ ಬಳಿ ನವಿಲುಗರಿಯ ಪಿಂಛವಿರುತ್ತದೆ.

ಜಿನಧರ್ಮವನ್ನು ಚ್ಕ್ರ ದ್ರೊಪ್ದ್ಲ್ಲ್ತೊರೀಸುತಾರೆ.ಿ ೀಕೆಲವ್ಪೊಮ್ಮೆ ಯಕ್ಷನೋರ್ವನು ಧರ್ಮಚಕ್ರವನ್ನು ತಲೆಯ ಮೇಲೆ ಹೊತ್ತಂತೆಯೂ ತೋರಿಸುತ್ತಾರೆ. ಅನೇಕ ಅರಗಳಿಂದ ಕೂಡಿದ ಇದು ಆಯುಧವಲ್ಲ. ಚಕ್ರವರ್ತಿಗಳಿಗೆ ಉಪಲಬ್ದವಾಗುವ ಚಕ್ರರತ್ನ ಕ್ಕೂ ಈ ಧರ್ಮಚಕ್ರಕ್ಕೂ ಅಂತರವಿದೆ. " ಚಕ್ರರತ್ನ ಭೋಗದ ಬಹಿರಂಗ ಶ್ತ್ರುಗಳನ್ನು ನಿಗ್ರಹಿಸುವ ನಶ್ವರ ಸುಖದ ಸಂಕೇತವಾದರೆ, ಧರ್ಮಚಕ್ರವು ಯೋಗದ ಅಂತರಂಗ ಶ್ತ್ರುನಿಗ್ರಹದ ಮುಕ್ತಿ ಸುಖಸಂಪದದ ಸಂಕೇತವಾಗಿದೆ. ತೀರ್ಥಂಕರರಿಗೆ ಕೇವಲ ಜ್ಞಾನೋತ್ಪತ್ತಿಯಾದ ಬಳಿಕ ಸಮವಸರಣ ಮಂಟಪದಲ್ಲಿ ಪ್ರಕಟವಾಗುವ ಮಂಗಲ ಚಿಹ್ನೆ ಯೇ ಈ ಧರ್ಮಚಕ್ರ. ಅವರು ಎಲ್ಲೆಲ್ಲಿ ಧರ್ಮೋಪದೇಶ್ಕ್ಕೆಂದು ವಿಹಾರ ಮಾಡುತ್ತಾರೆಯೋ, ಅಲ್ಲೆಲ್ಲ ಈ ದರ್ಮಚಕ್ರವು ಹೋಗುತ್ತಿರುತ್ತದೆ. ಸಮವಸರಣ ಮಂಟಪದ ನಾಲ್ಕೂ ಮಹಾದ್ವಾರಗಳಲ್ಲಿ ಒಂದೊಂದರಂತೆ ನಾಲ್ಕು ಮಾನಸ್ತಂಭಗಳಿರುತ್ತವಷ್ಟೇ! ಈ ಮಾನಸ್ತಂಭಗಳ ಹಿಂದೆ ನಿಂತು ತನ್ನ ಮಣಿಕಿರೀಟದ ಮೇಲೆ ಯಕ್ಷನು ಧರ್ಮಚಕ್ರವನ್ನು ಹೊತ್ತಿರುತ್ತಾನೆ. " ಮಹಾಪುರಾಣದ ಒಂದು ಸಂದರ್ಭದಲ್ಲಿ ತೀರ್ಥಂಕರರು ವಿರಾಜಿಸುತ್ತಿರುವ ಸಮವಸರಣ ಮಂಟಪದ ಮೊದಲನೆಯ ಪೀಠದಲ್ಲಿ ಅಷ್ಟಮಂಗಲ ದ್ರವ್ಯಗಳು ಹೊಳೆಯುತ್ತಿರುತ್ತವೆಂದು, ಯಕ್ಷರು ತಲೆಯ ಮೇಲೆ ಧರ್ಮಚಕ್ರವನ್ನು ಹಿಡಿದು ನಿಂತಿರುತ್ತಾರೆಂದೂ, ಈಚ್ಕ್ರವು ಸ್ಹ್ಸ್ರ ಆರ್ಗ್ಳೀಂದ್ ಹೊಡಿ,ೀ ಸೊರ್ಯ್ನಂತೆ ಹೊಳಯುತ್ದೆ.ಉಲ್ಲೇಖಿಸಲಾಗಿದೆ. ಜೈನ ಪರಂಪರೆಯಲ್ಲಿ ೨೨ನೇ ತೀರ್ಥಂಕರನ ಯಕ್ಷನ ಕೂಡ ಧರ್ಮಚಕ್ರವನ್ನು ಹೊತ್ತಿರುವಂತೆ ಚಿತ್ರಿಸುತ್ತಾರೆ. ಆದರೆ ಈ ಯಕ್ಷರು ಸರ್ವಾಹ್ಣಯಕ್ಷನಿಗಿಂತ ಭಿನ್ನ ರೆಂದು ಭಾವಿಸಬೇಕಾಗುತ್ತದೆ. ಮಹಾವೀರ ಸ್ವಾಮಿಯ ೨೫೦೦ ವರ್ಷದ ನಿರ್ವಾಣಮಹೋತ್ಸವವು ೧೯೭೫ ರಲ್ಲಿ ಭಾರತದಾದ್ಯಂತ ನಡೆದು ನಾಲ್ಕು ಧರ್ಮಚಕ್ರಗಳು ದೇಶ್ದಲ್ಲೆಲ್ಲ ಸಂಚರಿಸಿದವು. ಇವುಗಳಲ್ಲಿ ಒಂದು ಧರ್ಮಚಕ್ರವು ಶ್ರವಣಬೆಳಗುಳದಲ್ಲಿ ವಿರಾಜಮಾನವಾಗಿದೆ. ಧರ್ಮಚಕ್ರವು ವಿಹರಿಸಿದ ಕಡೆಗಳಲ್ಲಿ ಸುಖ-ಶಾಂತಿಗಳು ನೆಲೆಸುತ್ತವೆಂದೂ, ರೋಗ ರುಜಿನಗಳು ಮಾಯವಾಗುತ್ತವೆಂದೂ ಜೈನರ ಶಾಂತಿಮಂತ್ರದಲ್ಲಿ ಉಲ್ಲೇಖಿಸಲಾಗಿದೆ. ಹೀಗಾಗಿ ಬಸದಿಗಳಲ್ಲಿ ಧರ್ಮಚಕ್ರವಿರುವ ಸ್ವತಂತ್ರ ಬಿಂಬಗಳನ್ನು ನೋಡಬಹುದಾಗಿದೆ.

ನವದೇವತೆಗಳ ಪ್ರತಿಮೆಯಲ್ಲೂ, ಪೀಠದ ಮೇಲೆ ಧರ್ಮಚಕ್ರವು ನಿಂತಂತೆ ತೋರಿಸುತ್ತಾರೆ. ಕ್ರಿಶ. ೧೨ನೇ ಶತಮಾನಕ್ಕೆ ಸೇರಿದ ಧರ್ಮಚಕ್ರವನ್ನು ಹೊತ್ತ ಯಕ್ಷನ ಕಂಚಿನ ಪ್ರತಿಮೆಯೊಂದು ಮೂಡಬಿದಿರೆಯ ಬೆಟ್ಟದ ಬಸದಿಯಲ್ಲಿದೆ. ಶಿಲೆಯಿಂದ ಸ್ವತಂತ್ರವಾಗಿ ನಿರ್ಮಿಸಿದ ಸುಮಾರು ಆರು ಅಡಿ ಎತ್ತರದ ಧರ್ಮಚಕ್ರವನ್ನು ಹೊತ್ತ ಯಕ್ಷನ ವಿಗ್ರಹವು ತೀರ್ಥಹಳ್ಳಿಯ ಮೇಳಿಗೆ ಬಸದಿಯ ಎಡಭಾಗದಲ್ಲಿದೆ. ಈ ಬಸದಿಯ ಮೂಲ ವಿಗ್ರಹವು ಶಾಂತಿನಾಥ ಸ್ವಾಮಿಯಾದ್ದರಿಂದ, ಈ ಯಕ್ಷನ ಸರ್ವಾಹ್ಣ ಯಕ್ಷನಿಗಿಂತ ಭಿನ್ನ ನೆಂದು ತೋರತ್ತದೆ. ಈ ರೀತಿಯ ಅಪೂರ್ವವಾದ ವಿಗ್ರಹವು ಬೇರೆಕಡೆಗಳಲ್ಲಿ ಕಂಡು ಬಂದಿಲ್ಲ. ಎಲ್ಲೆಡೆ ಪ್ರಾಚೀನವಾದ ಧರ್ಮಚಕ್ರಗಳು ಕಂಡುಬಂದಿವೆ. ಉತ್ತರ ಪ್ರದೇಶದ ಶಹಾಬಾದ್ ಪ್ರಾಂತದ ಚೌಸಾಯೆಂಬಲ್ಲಿ ಗುಪ್ತಯುಗದ ಕ್ರಿಶ. ೨ನೇ ಶತಮಾನಕ್ಕೆ ಸೇರಿದ, ದರ್ಮಚಕ್ರವನ್ನು ಹಿಡಿದ ಕಂಚಿನ ಯಕ್ಷಿಣಿಯರ ಪ್ರತಿಮೆಗಳಿವೆ. ಗುಜರಾತಿನ ಶತ್ರುಂಜಯ ಪರ್ವತದ ಮೇಲೆ ೧೨ನೇ ಶತಮಾನಕ್ಕೆ ಸೇರಿದ ಬಸದಿಯೊಂದರಲ್ಲಿ ಯಕ್ಷರು ಧರ್ಮಚಕ್ರವನ್ನು ಹೊತ್ತು ನಿಂತಂತೆ ಚಿತ್ರಿಸಲಾಗಿದೆ. ಬಾದಾಮಿ, ಐಹೊಳೆ, ಎಲ್ಲೋರಾಗಳಲ್ಲಿರುವ ಪ್ರಚೀನ ಜೈನ ಗುಹಾಲಯಗಳ್ಲಿಲ್ಲ ಯಕ್ಷರು ದರ್ಮಚಕ್ರವನ್ನು ಹೊತ್ತುನಿಂತ ಹಲವಾರು ಚಿತ್ರಗಳಿವೆ.

ಜಿನಾಗಮವೆಂದರೆ ಜೈನ ಶಾಸ್ತ್ರವೆಂದು ಅರ್ಥ. ನವದೇವತೆಗಳ ಫಲಕದಲ್ಲಿ ಇದನ್ನು ವ್ಯಾಸಪೀಠದ ಕೆತ್ತನೆಯ ಮೂಲಕ ತೋರಿಸುತ್ತಾರೆ. ಶಾಸ್ತ್ರ ಗ್ರಂಥಗಳನ್ನು ವ್ಯಾಸಪೀಠದ ಮೇಲಿಟ್ಟು ಅಧ್ಯಯನ ಮಾಡುವ ಸಂಪ್ರದಾಯ ಬೆಳೆದು ಬಂದಿರುವುದರಿಂದ, ಈ ಕ್ರಮವು ರೂಢಿಗೆ ಬಂದಿರಬೇಕು. ಜಿನಚೈತ್ಯವೆಂದರೆ ಜಿನಬಿಂಬವೆಂದು ಅರ್ಥ ಮಾಡುತ್ತಾರೆ. ಚೈತ್ಯವೃಕ್ಷಗಳ ಜೊತೆಗಿರುವ ಜಿನಬಿಂಬಗಳೆಂದು ಅರ್ಥಮಾಡಿದರೆ ಹೆಚ್ಚು ಸೂಕ್ತವಾಗಬಹುದು. ಸಮವಸರಣದ ಎದುರಿನ ವನಭೂಮಿಯಲ್ಲಿ, ಅಶೋಕ, ಸಪ್ತಚ್ಛದ, ಚಂಪಕ, ಆಮ್ರ ಹೀಗೆ ನಾಲ್ಕು ಚೈತ್ಯವೃಕ್ಷಗಳಿದ್ದು ಪ್ರತಿಯೊಂದು ಚೈತ್ಯವೃಕ್ಷವನ್ನು ಆಶ್ರಯಿಸಿದ ನಾಲ್ಕು ದಿಕ್ಕುಗಳಲ್ಲಿ ಎಂಟು ಪ್ರಾತಿಹಾರ್ಯಗಳಿಂದ ಕೂಡಿದ ನಾಲ್ಕು ನಾಲ್ಕು ಜಿನಪ್ರತಿಮೆಗಳು ಇರುತ್ತವೆಂದು ಹೇಳಲಾಗಿದೆ. ಈ ಅಂಶವನ್ನು ಚರ್ಚಿಸುತ್ತ ಡಾ!! ಹೀರಾಲಾಲ್ ಜೈನ್ ಅವರು 'ಭಗವತೀ ವ್ಯಾಖ್ಯಾ ಪ್ರಜ್ಞಪ್ತಿ ಸೂತ್ರ'ವನ್ನು ಆದರಿಸಿ " . . .ಯಾವ ವೃಕ್ಷದ ಕೆಳಗೆ ಯಾವ ಕೇವಲಿಗೆ ಜ್ಞಾನವು ಪ್ರಾಪ್ತವಾಗುತ್ತದೋ ಅದನ್ನೇ ಆ ತೀರ್ಥಂಕರನ

ಅಶೋಕ ವೃಕ್ಷವೆಂದು ಹೇಳಲಾಗುತ್ತೆದೆ. ಕೇವಲ ಜ್ಞಾನದ ಸಂಬದದಲ್ಲಿ ಸಮಸ್ತ ವೃಕ್ಷಗಳ ಸಂಜ್ಞೆಯೂ ಕೂಡ ಆದಾಗಿದೆ. ಇದೇ ಕಾರಣದಿಂದ ವೃಕ್ಷಗಳ ಕೆಳಗಡೆಯಲ್ಲಿ ಪ್ರತಿಮೆಗಳನ್ನು ಸ್ಥಾಪನೆ ಮಾಡುವ ಪರಂಪರೆಯು ಪ್ರಾರಂಭವಾಗಿರಬೇಕೆಂದು ಹೇಳುತ್ತಾರೆ. ವೃಕ್ಷದ ಕೆಳಗೆ ಮೂರ್ತಿಯನ್ನು ಸ್ಥಾಪಿಸುವುದಕ್ಕೆಂದು ವೃಕ್ಷದ ನಾಲ್ಕೂ ಮಗ್ಗಲಿಗೆ ಇಟ್ಟಿಗೆ ಮೊದಲಾದವು ಗಳಿಂದ ವೇದಿಕೆಯನ್ನು ನಿರ್ಮಿಸಿದರು. ಇದಕ್ಕೆ ಚಿತಿ ಅಥವಾ ಚಯನವೆಂದೂ ಕರೆಯುತ್ತಾರೆ . ಋಷಭ ದೇವನ ನಿರ್ವಾಣದ ತರುವಾಯ ಅವನ ಸ್ಮೃತಿಗೆಂದು ಅವನ ಮಗನಾದ ಭರತನು ಅವನ ನಿರ್ವಾಣಸ್ಥಾನವಾದ ಕೈಲಾಸಪರ್ವತದ ಮೇಲೆ ಒಂದು ಚೈತ್ಯವನ್ನು ಸಿಂಹ–ನಿಷದ್ಯಾ–ಆಯತನವನ್ನೂ ನಿರ್ಮಿಸಿದಂತೆ ಉಲ್ಲೇಖಗಳು ಸಿಗುತ್ತವೆ. ನವದೇವತೆಗಳ ಘಟಕದಲ್ಲಿ ಚೈತ್ಯವನ್ನು ಸಾಂಕೇತಿಕವಾಗಿ ಅರಹಂತನ ಪ್ರತಿಮೆಯ ರೂಪದಲ್ಲಿ ತೋರಿಸಿರುವಂತೆ, ಬಸದಿಗಳಲ್ಲಿ ಇದನ್ನು ಸ್ವತಂತ್ರ ಚತುರ್ಮುಖಿ ಬಿಂಬಗಳ ಮೂಲಕ ತೋರಿಸಿದ್ದಾರೆ. ಮೂಡಬಿದಿರೆಯ ಬಸದಿಯಲ್ಲಿ ಚತುರ್ಮುಖಿ ಬಿಂಬವಿದೆ. ಕ್ರಿ.ಶ. ೯–೧೦ ನೇ ಶತಮಾನಕ್ಕೆ ಸೇರಿದ ಹಟ್ಟಿಯಂಗಡಿಯ ಚಂದ್ರನಾಥಸ್ವಾಮಿ ಬಸದಿಯಲ್ಲಿ ಶಿಲೆಯ ಸುಂದರವಾದ ಇಂಥ ಪ್ರತಿಮೆಯೊಂದನ್ನು ನೋಡಬಹುದಾಗಿದೆ. ಅರಿಹಂತನ ವಿಗ್ರಹವಿರುವ ಆಲಯ ಅಥವಾ ಚೈತ್ಯಾಲಯವನ್ನೇ ಬಸದಿಯೆಂದು ಕರೆಯುತ್ತಾರೆ. ಇದನ್ನು ಕೂಡ ಸಾಂಕೇತಿಕವಾಗಿ ನವದೇವತೆಗಳ ಪ್ರತಿಮೆಯಲ್ಲಿ ತೋರಿಸುತ್ತಾರೆ.

ನಂದಿಶ್ವರ ದ್ವೀಪ ಮತ್ತು ಮೇರು ಪರ್ವತ

ಬಸದಿಗಳಲ್ಲಿ ಪೂಜೆ ಮಾಡುವ ಬಿಂಬಗಳಲ್ಲಿ ನಂದಿಶ್ವರ ದ್ವೀಪ ಮತ್ತು ಮೇರುವಿನ ಪ್ರತಿಕೃತಿಗಳಿರುತ್ತವೆ. ತಿಲೋಕ ಪ್ರಜ್ಞಪ್ತಿ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ಉಕ್ತವಾಗುರುವಂತೆ ನಂದಿಶ್ವರ ದ್ವೀಪದ ವಿವರವು ಹೀಗಿದೆ:

"ಮಧ್ಯಲೋಕದ ಮಧ್ಯದಲ್ಲಿ ಒಂದು ಅಕ್ಷಯೋಜನ ವಿಸ್ತಾರವುಳ್ಳ ಜಂಬೂದ್ವೀಪ ವಿದೆ. ಈ ದ್ವೀಪದಿಂದ ಎಂಟನೆಯ ದ್ವೀಪವು ನಂದಿಶ್ವರ ದ್ವೀಪವಾಗಿದೆ . ವಲಯಾಕಾರದ ಈ ದ್ವೀಪದ ಒಂದೊಂದು ದಿಕ್ಕಿನಲ್ಲಿ ೧೩ರಂತೆ ಒಟ್ಟೂ ೫೨ ಪರ್ವತಗಳಿದ್ದು, ಅವುಗಳ ಮೇಲೆ ಒಂದೊಂದರಂತೆ

೫೨ ಅಕೃತಿಮ ಚೈತ್ಯಾಲಯಗಳಿಗುತ್ತವೆ. ಇವುಗಳಲ್ಲಿ ನವರತ್ನ ಮಯವಾದ ೧೦೮ ಜಿನಬಿಂಬಗಳಿದ್ದು, ವರ್ಷದ ಆಷಾಡ, ಕಾರ್ತಿಕ, ಫಾಲ್ಗುಣ ಮಾಸಗಳ ಶುಕ್ಲಪಕ್ಷಾಷ್ಟಮಿಯಿಂದ ಹುಣ್ಣಿಮೆಯವರೆಗೆ ಪ್ರತಿದಿನವೂ ದೇವಾಧಿದೇವತೆಗಳು ವಿಮಾನದಲಿ ನಂದಿಶ್ವರ ದ್ವೀಪಕ್ಕೆ ಬಂದು ಅಲ್ಲಿರುವ ಜಿನಬಿಂಬಗಳ ದರ್ಶನ ಮಾಡಿ ಭಕ್ತಿಯಿಂದ ನೃತ್ಯ, ಗೀತಾದಿಗಳಿಂದ ಪೂಜಿಸುತ್ತಾರೆ. ಇದರ ಪ್ರತಿಕೃತಿಯನ್ನು ರಚಿಸಿ ಪೂಜಿಸುವ ಸಂಪ್ರದಾಯವು ಬೆಳೆದು ಬಂದಿದೆ. ಕಂಚಿನ ನಂದಿಶ್ವರ ದ್ವೀಪದ ರಚನೆಗಳು ಸಾಮಾನ್ಯವಾಗಿ ಪ್ರತಿಯೊದು ಬಸದಿಯಲ್ಲಿಯೂ ಕಂಡುಬರುತ್ತವೆ. ಸಮ್ಮೇದಶಿಖರ (ಪಾರಿಸನಾಥ) ಪರ್ವತದ ಸಮೀಪದಲ್ಲಿ ೩೨ ಜಿನಮಂದಿರಗಳಿಂದ ಕೂಡಿದ ನಂದಿಶ್ವರ ದ್ವೀಪದ ರಚನೆಯನ್ನು ಮಾಡಿದ್ದಾರೆ. ಮೂಡಬಿದಿರೆಯ ತ್ರಿಭುವನ ತಿಲಕ ಚೂಡಾಮಣಿ ಬಸದಿಯ ಮೇಲಿನ ಅಂತಸ್ತಿನಲ್ಲಿ ಕ್ರಿ ಶ. ಸು ೧೫ನೇ ಶತಮಾನಕ್ಕೆ ಸೇರಿದ ಅತ್ಯಂತ ಸುಂದರವಾದ ಕಂಚಿನ ನಂದಿಶ್ವರ ದ್ವೀಪವಿದೆ. ಇದನ್ನು ನಗಿರೆಯ ಲಲಿತಾದೇವಿ ಎನ್ನುವವಳು ಮಾಡಿಸಿ ದಾನಬಿಟ್ಟಂತೆ ಮೂಡಬಿದಿರೆ ಜೈನಮಠದಲ್ಲಿರುವ ಒಂದು ತಾಮ್ರ ಶಾಸನವು ವಿವರಿಸುತ್ತದೆ. ಇಷ್ಟುಎತ್ತರವಾದ ನಂದಿಶ್ವರ ದ್ವೀಪದ ಪ್ರತಿಕೃತಿಯು ಬೇರೆ ಎಲ್ಲಿಯೂ ಕಂಡುಬಂದಿಲ್ಲ (ಚಿತ್ರ)

ಶ್ರವಣಬೆಳಗುಳದಲ್ಲಿ ತೇರಿನ ಬಸದಿಯಿದ್ದು ಇದನ್ನು ವಿಷ್ಣುವರ್ಧನನ ವರ್ತಕರಾದ ಹೊಯ್ಸಳಸೆಟ್ಟಿ, ನೇಮಿಸೆಟ್ಟಿಯರ ತಾಯಿಯರಾದ ಮಾಚಿಕಬ್ಬೆ, ಶಾಂತಿಕಬ್ಬೆಯರು ಕ್ರಿಶ. ೧೧೧೭ರಲ್ಲಿ ಕಟ್ಟಿಸಿದ್ದಾರೆ. ಇದರಲ್ಲಿ ತೇರಿನ ಹಾಗೆ ಕೆತ್ತನೆಯಿರುವ ಶಿಲ್ಪವಿರುವುದರಿಂದ ಜನರು ತೇರಿನ ಬಸದಿಯೆಂದು ಕರೆಯುತ್ತಾರೆ. ಕೆಲವು ವಿದ್ವಾಂಸರು ಇದನ್ನು ಮೇರು ಅಥವಾ ಮೇರುಪರ್ವತವೆಂದು ತಪ್ಪಾಗಿ ಗ್ರಹಿಸಿದಂತಿದೆ. ಇದರ ಮೇಲೆ ೬೩ ಜಿನ ಬಿಂಬಗಳಿರುವುದರಿಂದ ಇದನ್ನು ನಂದಿಶ್ವರ ದ್ವೀಪವೆಂದು ಹೇಳಬಹುದು.

ಮೇರುವಿನ್ ಕಲ್ಪನೆ ಮತ್ತು ಅದರ ಸ್ವರೂಪದ ವಿವರಗಳು ಕೂಡ ಪ್ರಾಚೀನ ಶಾಸ್ತ್ರ ಗ್ರಂಥಗಳಲ್ಲಿ ದೊರೆಯುತ್ತವೆ. ಈ ಮೇರು ಪರ್ವತದ ಮೇಲೆ ಪಾಂಡುಕಶಿಲೆಯಿದ್ದು ತೀರ್ಥಂಕರನ ಜನ್ಮವಾದ ಮೇಲೆ ದೇವೇಂದ್ರನು ಜಿನಬಾಲಕನನ್ನು ಈ ಶಿಲೆಯ ಮೇಲೆ ಕುಳ್ಳಿರಿಸಿ

ಅಭಿಷೇಕವನ್ನು ನಡೆಸುತ್ತಾನೆ. ಈ ಮೇರುವು ಜಂಬೂದ್ವೀಪ ಮತ್ತು ವಿದೇಹ ಕ್ಷೇತ್ರಗಳ ಮದ್ಯದಲ್ಲಿದೆಯೆಂದು ಭಾವಿಸುತ್ತಾರೆ. ಅರ್ಧಚಂದ್ರಾಕಾರದಲ್ಲಿ ಪಾಂಡುಕಶಿಲೆಯಿದ್ದು, ಪೂರ್ವ–ಪಶ್ಚಿಮ ೧೦೦೦ ಯೋಜನ ಉದ್ದವೂ, ಉತ್ತರ–ದಕ್ಷಿಣ ೫೦ ಯೋಜನ ಅಗಲವೂ, ಎಂಟು ಯೋಜನ ಎತ್ತರವೂ ಇದ್ದು, ಇದರ ಮಧ್ಯದಲ್ಲಿ ಒಂದು ಸಿಂಹಾಸನವಿರುತ್ತದೆ. ಎರಡೂ ಮಗ್ಗುಲಿನಲ್ಲಿ ಭದ್ರಾಸನಗಳಿರುತ್ತವೆ. ಅಭಿಷೇಕದ ಕಾಲದಲ್ಲಿ ಜಿನೇಂದ್ರನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಸೌಧರ್ಮ ಇಂದ್ರನು ದಕ್ಷಿಣ ಪೀಠದ ಮೇಲೆಯೂ ಈಶಾನೇಂದ್ರನು ಉತ್ತರಪೀಠದ ಮೇಲೆಯೂ ನಿಂತು ಅಭಿಷೇಕ ಮಾಡುತ್ತಾರೆ. ಈ ಮೇರುವಿನ ಪ್ರತಿಕೃತಿಗಳು ಕೂಡ ಜೈನ ಬಸದಿಗಳಲ್ಲಿ ಕಂಡುಬರುತ್ತವೆ.

ಬ್ರಹ್ಮ–ಕ್ಷೇತ್ರಪಾಲ –ನಾಗ ಶಿಲ್ಪಗಳು

ಜೈನ ಸಂಪ್ರದಾಯದಲ್ಲಿ ಹತ್ತನೆಯ ತೀರ್ಥಂಕರನಾದ ಶೀತಲನಾಥನ ಯಕ್ಷನ ಹೆಸರು, ಬ್ರಹ್ಮ ಅಥವಾ ಬ್ರಹ್ಮದೇವ. ಯಕ್ಷಿಯ ಹೆಸರು ಗೌರಿ, ಜೈನರಲ್ಲಿ ಇವನ ಬಗ್ಗೆ ಭಯಮಿಶ್ರಿತವಾದ ಭಕ್ತಿಯಿದೆ. ವೈದಿಕ ಕಲ್ಪನೆಯಲ್ಲಿ ಬೆಳೆದು ಬಂದಿರುವ ಚತುರ್ಮುಖ ಬ್ರಹ್ಮನ ಸ್ವರೂಪದಲ್ಲಿ ಈ ತೀರ್ಥಂಕರನ ಬ್ರಹ್ಮಯಕ್ಷನು ಗೋಚರಿಸುತ್ತಾನೆ. (ಚಿತ್ರ). ಇವರಿಗಿಂತ ಭಿನ್ನ ಸ್ವರೂಪದ ಬ್ರಹ್ಮನ ವಿಗ್ರಹಗಳು ಜೈನ ಸಂಪ್ರದಾಯದಲ್ಲಿ ಕಂಡುಬರುತ್ತವೆ. ತುಳುನಾಡು ಹಾಗೂ ಇತರ ಕಡೆಗಳಲ್ಲಿ ಇವನ್ನು ಗೆಜ್ಜೆ ಬ್ರಹ್ಮ, ತ್ಯಾಗದ ಬ್ರಹ್ಮ, ಬೆಟ್ಟದ ಬ್ರಹ್ಮ, ಕೊಡೆಬ್ರಹ್ಮ ಗುಂಡದ ಬ್ರಹ್ಮ ಹೀಗೆ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಜೈನ ಶಾಸ್ತ್ರ ಗ್ರಂಥಗಳಲ್ಲಿ ಇವನ ಮೈಬಣ್ಣ ಶ್ವೇತವೆಂದು ಹೇಳಿದರೂ, ಇವನ ವಿಗ್ರಹಕ್ಕೆ ಚಂದನವನ್ನು ಲೇಪಿಸಿ ಚಂದನವರ್ಣವನ್ನಾಗಿಸುತ್ತಾರೆ. ಕಮಲಾಸನ, ಹಂಸವಾಹನನೆಂದು ವರ್ಣಿತನಾಗಿದ್ದರೂ, ತುರಗವಾಹನನಾಗಿ ಕಾಣಿಸಿಕೊಂಡಿದ್ದಾನೆ. ಅಷ್ಟಬಾಹು, ಚತುರ್ಮುಖನೆಂದು ಹೇಳಿದ್ದರೂ ದ್ವಿಭುಜ, ಏಕವಕ್ತ್ರನಾಗಿದ್ದಾನೆ. ಶ್ವೇತಾಂಬರ ಜೈನರು, ಇವನನ್ನು ದ್ವಾದಶಾಕ್ಷ್ಯನೆಂದು ಕರೆಯುತ್ತಾರೆ.

ಈಗಾಗಲೇ ವಿವರಿಸಿರುವಂತೆ ಬಾಹುಬಲಿ ವಿಗ್ರಹದ ಎದುರಿನ ಬ್ರಹ್ಮಸ್ತಂಭದ ಮೇಲೆ ಬ್ರಹ್ಮನ ವಿಗ್ರಹವಿರುತ್ತದೆ. ಇಲ್ಲಿ ಆತನನ್ನು ಕ್ಷೇತ್ರರಕ್ಷಕನೆಂದು ಗುರುತಿಸುತ್ತಾರೆ. ಆದರೆ

ಜಿನಮಂದಿರದ ಹೊರಭಾಗದಲ್ಲಿ ಕ್ಷೇತ್ರಪಾಲನ ಸ್ಥಾನವು ಪ್ರತ್ಯೇಕವಾಗಿದ್ದು ಅಲ್ಲಿ ಭೈರವನನ್ನು ಕ್ಷೇತ್ರಪಾಲನೆಂದು ಆರಾಧಿಸುತ್ತಾರೆ. ಸ್ವಾರಸ್ಯದ ವಿಷಯವೆಂದರೆ ಈ ಭೈರವ ಕ್ಷೇತ್ರಪಾಲನು ವೈದಿಕ ಪರಂಪರೆಯ ವೀರಭದ್ರನ ಪ್ರತಿರೂಪದಂತೆ ಕಂಡು ಬರುತ್ತಾನೆ. ಅಷ್ಟೇ ಅಲ್ಲ, ಜೈನ ಕ್ಷೇತ್ರಪಾಲನ್ ಸ್ತುತಿಯಲ್ಲಿ ಬರುವ ವರ್ಣನೆಗಳೆಲ್ಲವೂ ವೀರಭದ್ರನ ಹೋಲಿಕೆಯನ್ನು ಒಳಗೊಂಡಿದೆ. ಗೇರುಸೊಪ್ಪೆಯಲ್ಲಿ ಕ್ರಿ.ಶ. ೧೦–೧೫ನೇ ಶತಮಾನಕ್ಕೆ ಸೇರಿದ ಸುಮಾರು ನಾಲ್ಕು ಅಡಿ ಎತ್ತರದ ಕ್ಷೇತ್ರಪಾಲನ ವಿಗ್ರಹವಿದೆ. ಕ್ರಿಶ. ೧೨ನೇ ಶತಮಾನಕ್ಕೆ ಸೇರಿದ ಕ್ಷೇತ್ರಪಾಲನ ಒಂದು ವಿಗ್ರಹವು ಮೂಡಬಿದಿರೆ ಅಮ್ಮನವರ ಬಸದಿಯ ಬಲಭಾಗದಲ್ಲಿವೆ. ಈ ಎರಡೂ ವಿಗ್ರಹಗಳು ನಗ್ನ ವಾಗಿದ್ದು ರುಂಡಮಾಲೆಯನ್ನು ಧರಿಸಿವೆ. ಕೈಗಳಲ್ಲಿ ಡಮರು, ತ್ರಿಶೂಲ, ಖಟ್ವಂಗ ಮುಂತಾದ ಆಯುದಗಳಿವೆ. ಕ್ಷೇತ್ರರಕ್ಷಣೆಯ ನೆಲೆಯಲ್ಲಿ ಬ್ರಹ್ಮನಿಗೂ, ಕ್ಷೇತ್ರಪಾಲನಿಗೂ ಇರುವ ಸಂಬಂದದ ಕಲ್ಪನೆಗೆ ಕಾರಣವು ಸ್ಪಷ್ಟವಾಗಿಲ್ಲತುಳುನಾಡಿನ ಕೆಲವೆಡೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಕ್ಷೇತ್ರಪಾಲನೆಂದು ಕರೆಯುವ ಸ್ಥಾನದಲ್ಲಿ ಕುದುರೆಯ ಮೇಲೆ ಕುಳಿತ ಬ್ರಹ್ಮನ ವಿಗ್ರಹವಿದ್ದು ಅದನ್ನೇ ಬ್ರಹ್ಮಕ್ಷೇತ್ರಪಾಲನೆಂದು ಕರೆಯುತ್ತಾರೆ. ಇಷ್ಟೇ ಅಲ್ಲ ತುಳುವರ ನಾಗನನ್ನು ನಾಗ ಬ್ರಹ್ಮನೆಂದು ಕರೆದು ಗೌರವಿಸುವಂತೆ, ಕ್ಷೇತ್ರಪಾಲನ ಸ್ಥಳದಲ್ಲಿರುವ ನಾಗಪ್ರತಿಮೆಗಳನ್ನು ನಾಗ ಬ್ರಹ್ಮನೆಂದು ಹೆಸರಿಸುವ ಪದ್ಧತಿಯು ಅಲ್ಲಲ್ಲಿ ಕಂಡುಬರುತ್ತದೆ.

ಇನ್ನು ತುಳುನಾಡಿನಲ್ಲಿ ಪೂಜೆಗೊಳ್ಳುವ ಬೆರ್ಮೆರ್ ಅಥವಾ ಬ್ರಹ್ಮನು ತುಳುವರ ಕುಲದೈವವಾಗಿದ್ದಾನೆ. ಈತ ವೈದಿಕ ಪರಂಪರೆಯ ಚತುರ್ಮುಖ ಬ್ರಹ್ಮನಲ್ಲ. ತುಳುವರ ಮೂಲಸ್ಥಾನವಾದ ಆಲಡೆಯಲ್ಲಿ ಇವನಿಗೆ ಪ್ರಮುಖ ಸ್ಥಾನವಿದೆ. ಅಲ್ಲಿ ನಾಗ, ನಂದಿಗೋಣು, ರಕ್ತೇಶ್ವರಿ, ಕ್ಷೇತ್ರಪಾಲರ ಜೊತೆಗೆ ಇವನನ್ನು ಆರಾಧಿಸುತ್ತಾರೆ. ಇವನು ನಾಗನಂತೆಯೇ ಸಂತಾನ ದೇವತೆ. ಹೀಗಾಗಿ , ನಾಗಬ್ರಹ್ಮನೆಂಬ ಕಲ್ಪನೆಯೊಂದು ಹುಟ್ಟಿಕೊಂಡಿದೆ. ಎಂಟನೆಯ ಶತಮಾನದ ಬೆಳ್ಮಣ್ಣು ಶಾಸನದಲ್ಲಿ ಬ್ರಹ್ಮನು ತುಳುದೊರೆಗಳ ಕುಲದೈವವೆಂಬ ಸೂಚನೆಯು ದೊರೆಯುತ್ತದೆ. ಕೋಟಿ ಚೆನ್ನಯ್ಯರ ಪಾಡ್ದನದಲ್ಲಿ, ಕೋಟಿಚೆನ್ನಯ್ಯರು ಎಣಂಬೂರು ಅರಮನೆಗೆ ಹೋಗುವ ದಾರಿಯಲ್ಲಿ ಕೆಮ್ಮಲೆಯ ಬೆರ್ಮೆರ್ ಭೂತದ ಸ್ಥಾನಕಂಡು ದರ್ಶನ ಮಾಡುತ್ತಾರೆ. ಭೂತವು

ಇವರಿಗೆ ಬೊಳ್ಳಿಯ ಕುದುರೆಯೇರಿ, ಖಡ್ಗಧಾರಿಯಾಗಿ, ತಲೆಯಮೇಲೆ ಕೊಡೆಹಿಡಿದ ರಾಜಯೋಧನಂತೆ ಕಾಣಿಸುತ್ತದೆ. ಈ ಬ್ರಹ್ಮನನ್ನು ತುಳುವರು ಬ್ರಹ್ಮನೆಂದು ಅರ್ಥಮಾಡುತ್ತಾರೆ. ಇವನು ವನದೇವತೆ, ಲೌಕಿಕ ಆಗು–ಹೋಗುಗಳ ಜೊತೆಗೆ ಸಂಬಧವಿಟ್ಟುಕೊಳ್ಳುತ್ತಾನೆ. ಈ ಹಿನ್ನೆಲೆಯಲ್ಲು ಜೈನ ಸಂಪ್ರದಾಯದಲ್ಲಿ ಪ್ರಚಲಿತವಿರುವ ಬ್ರಹ್ಮನ ವಿಗ್ರಹವನ್ನು ಹೀಗೆ ವಿಮರ್ಶಿಸಬಹುದಾಗಿದೆ.

ಶೀತಲ ತೀರ್ಥಂಕರನ ಶಾಸನ ದೇವತೆಯಾದ ಬ್ರಹ್ಮಯಕ್ಷನು ಚತುರ್ಮುಖ ನಾಗಿದ್ದು ಕಮಲ ವಾಹನನಾಗಿದ್ದಾನೆ. ಇವನಿಗೆ ಎಂಟು ಕೈಗಳಿದ್ದು ವಿವಿಧ ಆಯುಧಗಳನ್ನು ಹಿಡಿದಿರುತ್ತಾನೆ.

ಬಾಹುಬಲಿ ವಿಗ್ರಹದ ಎದುರಿನ ಬ್ರಹ್ಮಸ್ತಂಭದ ಮೇಲಿರುವ ಬ್ರಹ್ಮನ ವಿಗ್ರಹವು ಸುಖಾಸೀನ ಭಂಗಿಯಲ್ಲಿರುತ್ತದೆ. ಇವನು ರಾಜನಂತೆ ಕಿರೀಟದಾರಿಯಾಗಿ ಒಂದು ಕೈಯಲ್ಲಿ ಮಾದಳ ಫಲವನ್ನೂ (ಬಹುಬೀಜ ಫಲ) ಇನ್ನೊಂದು ಕೈಯಲ್ಲಿ ವಜ್ರಾಯುಧವನ್ನೂ ಹಿಡಿದಿರುತ್ತಾನೆ. ಇಲ್ಲಿ ಆತನು ಕ್ಷೇತ್ರರಕ್ಷಕನಾಗಿದ್ದಾನೆ.

ಸ್ವತಂತ್ರ ಶಿಲ್ಪದ ವಿನ್ಯಾಸದಲ್ಲಿ ಕಂಡುಬರುವ ಮತ್ತೊಂದು ರೀತಿಯ ಬ್ರಹ್ಮನು ಕುದುರೆಯ ಮೇಲೆ ಕುಳಿತಿದ್ದು, ಕುದುರೆಯು ಕೆನೆಯುವ ಭಂಗಿಯಲ್ಲಿ ತನ್ನ ಮುಂಗಾಲನ್ನು ಎತ್ತಿ ಹಿಡಿದಿರುತ್ತದೆ. ಅದರ ಕೆಳಗೆ ಹುಲಿಯ ಚಿತ್ರವಿರುತ್ತದೆ. ಇವನು ರಾಜಯೋಧನಂತಿದ್ದು ಒಂದು ಕೈಯಲ್ಲಿ ಖಡ್ಗವನ್ನೂ, ಮತ್ತೊಂದು ಕೈಯಲ್ಲಿ ಬಹುಬೀಜ ಫಲವನ್ನೂ ಹಿಡಿದಿರುತ್ತಾನೆ. ಈ ರೀತಿಯ ಶಿಲ್ಪವು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ. ಇವನ ಕೈಯಲ್ಲಿರುವ ಖಡ್ಗವು ಕ್ಷಾತ್ರದ ಸಂಕೇತವಾದರೆ, ಬಹುಬೀಜ ಫಲವು ಸಂತಾನ ಶಕ್ತಿಯ ಅಥವಾ ಫಲಶಕ್ತಿಯ ಪ್ರತೀಕವಾಗಿದೆ. ತಲೆಯ ಮೇಲೆ ಕಿರೀಟ ಹಾಗೂ ಮುಕ್ಕೊಡೆಗಳೂ ಇರುತ್ತವೆ. ಇಂಥ ಶಿಲ್ಪಗಳು ಹೆಚ್ಚಾಗಿ ಶಿಲೆಯಿಂದ ಮಾಡಿದವುಗಳಾಗಿದ್ದು, ನೆಲ್ಲಿಕಾರಿನ ಅನಂತನಾಥ ಬಸದಿಯ ಒಳಗಡೆ ಗುಂಡದಲ್ಲಿ ಕ್ರಿಶ. ೧೨ನೇ ಶತಮಾನಕ್ಕೆ ಸೇರಿದ ವಿಗ್ರಹವಿದೆ. ಅಲ್ಲಿಯ ರಥೋತ್ಸವದ ಸಂದರ್ಭದಲ್ಲಿ ದರ್ಶನಕ್ಕೆ ಇಟ್ಟಿರುತ್ತಾರೆ. ಕ್ರಿಶ. ೧೬ನೇ ಶತಮಾನದ ಮಹೇಂದ್ರಕೀರ್ತಿಯೆಂಬ ಕವಿಯು ಇವನನ್ನು ಗೆಜ್ಜೆ ಬ್ರಹ್ಮನೆಂದು ಕರೆದು ಸ್ತುತಿಸಿದ್ದಾನೆ. ಶ್ವೇತವರ್ಣ, ಮೊರೆಹೊಕ್ಕವರನ್ನು

ಕಾಯುವವನು, ಭೂತಗ್ರಹ , ಮಾಣಿ ಮಸಣಿ , ಚಂಡಿಯರನ್ನು ತೊತ್ತು ಗೆಲಸಕ್ಕೆ ನೇಮಿಸುವವನು, ಹುಟ್ಟು ಬಂಜೆಯರಿಗೆ ಸಂತಾನ ಭಾಗ್ಯ ಕರುಣಿಸುವವನು, ತೊಟ್ಟಿಲು ಶಿಶುವನ್ನು ರಕ್ಷಿಸುವವನು, ಗಿಡ, ಬಳ್ಳಿ, ಧಾನ್ಯ ಹೊಲಗಳನ್ನು ಕಾಪಾಡುವವನು, ಬಂಗ ನರೇಂದ್ರನ ಕುಲಸ್ವಾಮಿ, ವೇಣುಪುರದ ಹಲರನ್ನು (ವ್ಯಾಪಾರಿಗಳ ಸಂಘ) ರಕ್ಷಿಸುವವನು ಎಂದು ಇವನ ಸ್ವಭಾವ ಚಿತ್ರವನ್ನು ನೀಡಿದ್ದಾರೆ. ಬಂಗವಾಡಿಯ ಶ್ರವಣಗುಂಡದಲ್ಲಿ ಹಾಗೂ ಗುರುವಾಯನ ಕೆರೆಯ ಪಂಚಸ್ತಂಭದ ಮೇಲೆ ಹೊಯ್ಸಳರ ಕಾಲಕ್ಕೆ ಸೇರಿದ ಇಂಥ ವಿಗ್ರಹವಿದೆ. ಉಜಿರೆಯ ಹತ್ತಿರದ ನಿಡಗಲ್ಲಿನ ಶಾಂತಿನಾಥನ ಬಸದಿಯ ಬಲಗಡೆಯಲ್ಲಿ ಬ್ರಹ್ಮನ ಗುಡಿಯಿದ್ದು, ಅಲ್ಲಿರುವ ಒರಟುಗಲ್ಲನ್ನೇ ಉದ್ಭವ ಬ್ರಹ್ಮನೆಂದು ಕರೆಯುತ್ತಾರೆ. ಜೈನ, ಜೈನೇತರರೆಲ್ಲರೂ ಈ ಬ್ರಹ್ಮನಿಗೆ ಪೂಜೆಸಲ್ಲಿಸುವ ಸಂಪ್ರದಾಯವು ಬಹು ಕಾಲದಿಂದಲೂ ನಡೆದುಕೊಂಡು ಬಂದಿವೆ. ಕೃಷಿಕರು ತಾವು ಬೆಳೆದ ಹೊಸ ಫಲವನ್ನು , ಧಾನ್ಯವನ್ನು ಇವನಿಗರ್ಪಿಸಿದ ಬಳಿಕವೇ ತಾವು ಉಪಯೋಗಿಸುತ್ತಾರೆ. ಹೊಸ ಅಕ್ಕಿಯ ಊಟದ ಸಂದರ್ಭದಲ್ಲಿ ಊರಿನ ಸಮಸ್ತರು ಜಾತಿಭೇದವನ್ನು ಮರೆತು ಇವನಿಗೆ ಸೀಯಾಳದ ಅಭಿಷೇಕ, ಎಣ್ಣೆಮಜ್ಜನವನ್ನು ಮಾಡಿಸುತ್ತಾರೆ. ಹಾಡುವಳ್ಳಿ, ಆಳದಂಗಡಿ ಯಲ್ಲಿ ಎತ್ತರದ ಬೆಟ್ಟದ ಮೇಲೆ ಇಂಥ ಬ್ರಹ್ಮ ಶಿಲ್ಪವಿದೆ. ಆಳದಂಗಡಿಯ ಬ್ರಹ್ಮ ಶಿಲ್ಪಕ್ಕೆ ಕ್ರಿ.ಶ. ೧೬೪೬ರಲ್ಲಿ ಇಮ್ಮಡಿಭೈರರಸನು ಕಾರ್ಕಳದ ಬಾಹುಬಲಿಯ ಮಸ್ತಕಾಭಿಷೇಕವನ್ನು ನಡೆಸಿದಾಗ ಸಾವಿರ ಬಾಳೆಯಗೊನೆ, ಸಾವಿರ ಎಳೆನೀರನ ಅಭಿಷೇಕ, ಎಣ್ಣೆಮಜ್ಜನವನ್ನು ಮಾಡಿಸಿರುವುದಗಿ ಚದುರ ಚಂದ್ರಮನು ಹೇಳುತ್ತಾನೆ.

ಇನ್ನೊಂದು ರೀತಿಯ ಬ್ರಹ್ಮನ ಶಿಲ್ಪವು ಬಸದಿಯ ಒಳಗಡೆಯಲ್ಲಿರುತ್ತದೆ. ಕಂಚಿನಿಂದ ಎರಕ ಹೊಯ್ದಿರುವ ಇಂಥ ವಿಗ್ರಹದ ವಿನ್ಯಾಸದಲ್ಲಿ ಅವನು ಕುದುರೆಯ ಮೇಲೆ ಕುಳಿತು ರಾಜಯೋಧನಂತೆ ಕಂಡು ಬರುತ್ತಾನೆ . ಕೈಯಲ್ಲಿ ಖಡ್ಗ ಮತ್ತು ಬಹುಬೀಜಫಲ ವಿರುತ್ತದೆ. ಕಾಲಿನ ಕೆಳಗೆ ಹುಲಿಯ ಲಾಂಛನ ಮಾತ್ರ ಇರುವುದಿಲ್ಲ.

ಕ್ರಿ. ಶ. ೭–ಲನೇ ಶತಮಾನಕ್ಕೆ ಶತಮಾನಕ್ಕೆ ಸೇರಿದ ಬ್ರಹ್ಮನ ಪ್ರಾಚೀನ ಉಬ್ಬುಶಿಲ್ಪವೊಂದು ಹುಂಬುಜದ ಪದ್ಮಾವತೀ ದೇವಿಯ ಗದ್ದುಗೆಯ ಮೇಲೆ ಕೆತ್ತಲಾಗಿದೆ. ಲಕ್ಕೀಮರದ ಕಟ್ಟೆಯಲ್ಲಿ

ಇದನ್ನು ನೋಡಬಹುದಾಗಿದೆ. ಇತರ ಕಡೆಗಳಲ್ಲೂ ಇಂಥ ಶಿಲ್ಪಗಳು ಹೆಂಚಿನ ಸಂಖ್ಯೆಯಲ್ಲಿ ಕಂಡು ಬಂದಿವೆ.

ಕೋಟಿ–ಚೆನ್ನಯ್ಯರಿಗೆ ಬಿಳಿಯ ಕುದುರೆಯನ್ನೇರಿ ದರ್ಶನ ನೀಡಿದ ಬ್ರಹ್ಮನು ತುಳುನಾಡಿನ ಗುಂಡದಲ್ಲಿರುವ ಬ್ರಹ್ಮನ ಪ್ರತಿರೂಪವೆಂದು ಕೆಲವು ವಿದ್ವಾಂಸರು ಭಾವಿಸುತ್ತಾರೆ. ಹುಲಿಯ ಚಿತ್ರವು ಬ್ರಹ್ಮನ ಕಾಲುಬುಡದಲ್ಲಿ ಇರಲೇಬೇಕೆಂಬ ನಿಯಮವೇನೂ ಇಲ್ಲ. ಈ ದೃಷ್ಟಿಯಿಂದ ತುಳುವರ ಕುಲದೈವನಾದ ಬ್ರಹ್ಮ ಅಥವಾ ಬೆರ್ಮೆರ್ ಮೂಲತಃ ಜೈನ ಯಕ್ಷನಾಗಿದ್ದು ತುಳುಜಾನಪದ ಲೋಕಕ್ಕೆ ಸೇರ್ಪಡೆಗೊಂಡಿರಬೇಕು. ತುಳುವರ ಕಲ್ಪನೆಯಲ್ಲಿರುವ ವನದೇವತೆ, ಸಂತಾನದೇವತೆ, ಎತ್ತರದ ಬೆಟ್ಟದಲ್ಲಿ ವಾಸಮಾಡುವವನು, ಬಿಳಿಯ ಕುದುರೆಯೇರಿ ರಾಜಯೋಧನಂತೆ ಕಂಡುಬರುವವನು. ಈ ವರ್ಣನೆಗಳೆಲ್ಲವೂ ಜೈನ ಯಕ್ಷನಿಗೆ ಚೆನ್ನಾಗಿ ಅನ್ವಯಿಸುತ್ತದೆ.

ನಾಗಶಿಲ್ಪ

ನಾಗಶಿಲ್ಪವು ಜೈನಬಸದಿಯ ಆವರಣದೊಳಗೆ ಕ್ಷೇತ್ರಪಾಲನ ಸ್ಥಾನದಲ್ಲಿ ಸ್ವತಂತ್ರ ರೂಪದಲ್ಲಿ ಕಂಡು ಬರುತ್ತದೆ. ಪಾರ್ಶ್ವನಾಥ ಶಾಸನದೇವತೆಗಳಾದ ಧರಣೇಂದ್ರ ಮತ್ತು ಪದ್ಮಾವತಿಯರು ನಾಗಮಿಥುನಗಳೇ ಆಗಿದ್ದಾರೆ. ಪಾರ್ಶ್ವನಾಥನ ತಲೆಯ ಮೇಲೆ ನಾಗನ ಚಿತ್ರವಿರುವಂತೆ, ಸುಪಾರ್ಶ್ವನಾಥನ ತಲೆಯ ಮೇಲೆಯೂ ನಾಗನ ಹೆಡೆಯನ್ನು ತೋರಿಸುತ್ತಾರೆ. ಪಾರ್ಶ್ವನಾಥನಿಗೆ ಕಮಠನು ಅನೇಕ ರೀತಿಯ ಉಪಸರ್ಗವನ್ನು ನೀಡುತ್ತಿದ್ದಾಗ ಧರಣೇಂದ್ರ–ಪದ್ಮಾವತಿಯರು ಆಗಮಿಸಿ ಈ ಉಪಸರ್ಗವನ್ನು ಹೆಡೆಯನ್ನು ಅರಳಿಸಿ ನಿಂತು ಪಾರ್ಶ್ವನಾಥನಿಗೆ ರಕ್ಷಣೆ ನೀಡುತ್ತಿದ್ದುದನ್ನು ಚಿತ್ರಿಸುತ್ತಾರೆ.

ಜೈನೇತರರು ನಾಗನನ್ನು ಆರಾಧಿಸಿ ಸಂತಾನಭಾಗ್ಯವನ್ನು ಪಡೆಯುವಂತೆ, ಜೈನರೂ ಕೂಡ ನಾಗನಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ನಾಗರಪಂಚಮಿ ನೋಂಪಿಯು ಜೈನರಲ್ಲಿ ಪ್ರಚಲಿತವಿರುವದನ್ನು ಇಲ್ಲಿ ಸ್ಮರಿಸಬಹುದು. ತುಳುನಾಡಿನಲ್ಲಿ ನಡೆಯುವ ಜೈನಮತೀಯರ ವಿವಾಹ ಪದ್ಧತಿಯಲ್ಲಿ ವಧುವಿನ ತಾಯಿಯು ಕೈಗೊಳ್ಳುವ ನಾಗಬಲಿ ಶಾಸ್ತ್ರ ಮಂತೂ ನೇರವಾಗಿ ನಾಗನಿಗೆ

ಸಲ್ಲುವ ಪೂಜೆಯೇ ಆಗಿದೆ. ಪಂಚಮನಿಂದ ಬರೆದ ಮಂಡಲದಲ್ಲಿ ಅಷ್ಟನಾಗದೇವತೆಯರ ಚಿತ್ರವಿರುತ್ತದೆ.

ನಾಗನನ್ನು ಆರಾಧಿಸುವ ಸಂಪ್ರದಾಯವು ಪ್ರಾಗೈತಿಹಾಸಿಕ ಕಾಲದಿಂದಲೂ ರೂಢಿಯಲ್ಲಿರಿವುದನ್ನು ಚರಿತ್ರೆಕಾರರು ತೋರಿಸಿಕೊಟ್ಟಿದ್ದರು. ಈ ದೃಷ್ಠಿಯಿಂದ ನಾಗನು ಜಾತಿ, ಧರ್ಮ ಪ್ರದೇಶ'ವನ್ನು ಮೀರಿದ ದೇವತೆ, ಭಾರತದ ಎಲ್ಲಾ ಧರ್ಮಸೇನಾ ನಾಗನನ್ನು ಒಂದಲ್ಲ ಒಂದು ರೀತಿಯಿಂದ ಸ್ವೀಕರಿಸುವಂತೆ ಜೈನಮತವೂ ಕೂಡ ನಾಗನನ್ನು ಸ್ವೀಕರಿಸಿದೆ. ಸಿಂಧು ಸಂಸ್ಕೃತಿಯ ಅವಶೇಷದಲ್ಲಿಯೇ ನಾಗಮಿಥುನನ ಶಿಲ್ಪವಿದೆ. ಋಗ್ವೇದದ ಪ್ರಧಾನ ದೇವತೆ ನಾಗನೇ ಭಾರತದಲ್ಲಷ್ಟೇ ಏಕೆ ಇಜಿಪ್ತ್, ಗ್ರೀಸ್, ಆಸೀರಿಯಾ ಮುಂತಾದ ಸಂಸ್ಕೃತಿಯಲ್ಲೂ ನಾಗನಿಗೆ ಸ್ಥಾನವಿದೆ.